Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 01-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 01-12-2020 |
| --- | --- |
| Page No | 2 |

### ಮನೆ ಮುಂದೆ, ಸರ್ಕಾರಿ ಜಾಗದಲ್ಲಿ ವಾಹನ ನಿಲ್ಲಿಸುವುದಕ್ಕೆ ಶುಲ್ಕ • ಇಂದು ನಿರ್ಧಾರ?

# ಪಾರ್ಕಿಂಗ್ ನೀತಿ ಮರು ಪರಿಶೀಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ರೂಪಿಸಿದ್ದ 'ವಾಹನ ನಿಲುಗಡೆ ನೀತಿ'ಯಲ್ಲಿರುವ ಕೆಲವು ಅಂಶಗಳಿಗೆ ಆಕ್ಷೇಪ ವ್ಯಕ್ತವಾಗಿರುವುದರಿಂದ ಈ ನೀತಿಯ ಪುನರ್ ಪರಿಶೀಲನೆಗೆ ಸರ್ಕಾರ ಮುಂದಾಗಿದೆ.

ಹೊಸ ಪಾರ್ಕಿಂಗ್ ನೀತಿ ಬಗ್ಗೆ ಸಮಾಲೋಚಿಸಿ ಸೂಕ್ತ ತಿದ್ದುಪಡಿ ಅಳವಡಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹಿರಿಯ ಅಧಿಕಾರಿಗಳ ಸಭೆಯನ್ನು ಮಂಗಳವಾರ ನಡೆಸಲಿದ್ದಾರೆ.

ಪಾರ್ಕಿಂಗ್ ನೀತಿಯ ಕರಡನ್ನು ಡಲ್ಟ್ 2020ರ ಮಾರ್ಚ್‌ನಲ್ಲಿ ಸಾರ್ವಜನಿಕರ ಮುಂದಿಟ್ಟಿತ್ತು. ಇದಕ್ಕೆ ಸರ್ಕಾರೇತರ ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆಗಳು (ಆರ್‌ಡಬ್ಲ್ಯುಎ) ಹಾಗೂ ನಾಗರಿಕರಿಂದ 60ಕ್ಕೂ ಅಧಿಕ ಪ್ರತಿಕ್ರಿಯೆಗಳು ಬಂದಿದ್ದವು. ಒಟ್ಟು 360 ಸಲಹೆಗಳನ್ನು ಡಲ್ಟ್ ಸ್ವೀಕರಿಸಿತ್ತು. ಸಲಹೆ, ಆಕ್ಷೇಪಣೆಗಳನ್ನು ಪರಿಗಣಿಸಿ ಅಂತಿಮ ರೂಪ ನೀಡಿದೆ.

'ಕರಡಿನಲ್ಲಿದ್ದ ಪ್ರಮುಖ ಅಂಶಗಳು ಹಾಗೆಯೇ ಇವೆ. ಸಾರಿಗೆ ಆಧರಿತ ಅಭಿವೃದ್ಧಿ ನೀತಿಗೆ ಅನುಗುಣವಾಗಿ ಈ ನೀತಿ ಇರಬೇಕು ಎಂಬ ಕಾರಣಕ್ಕೆ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಲಾಗಿದೆ' ಎಂದು ಡಲ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದರು.

**ನೀತಿಯಲ್ಲೇನೇನಿದೆ?:** ನಗರದಲ್ಲಿ ಪ್ರದೇಶವಾರು ಪಾರ್ಕಿಂಗ್ ಯೋಜನೆ ರೂಪಿಸುವುದು, ಇದರ ಅನುಷ್ಠಾನಕ್ಕೆ ಪ್ರತಿ ಬಿಬಿಎಂಪಿಯ ವಲಯಕ್ಕೊಂದು ಕಾರ್ಯಪಡೆ ಹೊಂದುವ ಪ್ರಸ್ತಾವಗಳು ಈ ನೀತಿಯಲ್ಲಿವೆ. ಖಾಸಗಿ ವಾಹನ ಬಳಕೆಯನ್ನು ಕಡಿಮೆ ಮಾಡಿ, ಸಾರ್ವಜನಿಕ ವಾಹನ ಬಳಕೆಗೆ ಉತ್ತೇಜನ ನೀಡುವ ಆಶಯದಿಂದ ಈ ಪಾರ್ಕಿಂಗ್ ನೀತಿಯನ್ನು ರೂಪಿಸಲಾಗಿದೆ. ಮನೆ ಮುಂದಿನ ರಸ್ತೆಗಳಲ್ಲಿ ವಾಹನ ನಿಲ್ಲಿಸುವುದಕ್ಕೆ ನಿಗದಿತ ಶುಲ್ಕ ಪಾವತಿಸಿ ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸುವುದು, ಮನೆಯಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಇಲ್ಲದಿದ್ದರೆ ವಾಹನ ಖರೀದಿಗೆ ಅವಕಾಶ ಕಲ್ಪಿಸದಿರುವುದು ಸೇರಿದಂತೆ ಅನೇಕ ಮಹತ್ತರ ಅಂಶಗಳನ್ನು ಇದು ಒಳಗೊಂಡಿದೆ.

**ಕಾರ್ಯಪಡೆಗೇನು ಕೆಲಸ:** ಪ್ರದೇಶವಾರು ಪಾರ್ಕಿಂಗ್ ಬೇಡಿಕೆಗಳನ್ನು ಆಧರಿಸಿ ಅಲ್ಲಿ ಲಭ್ಯ ಇರುವ ಸಂಪನ್ಮೂಲ ಬಳಸಿ ವಾಹನ ನಿಲುಗಡೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಇದಕ್ಕೆ ಅಗತ್ಯ ವ್ಯವಸ್ಥೆರೂಪಿಸಿ ಜಾರಿಗೊಳಿಸುವ ಸಂಪೂರ್ಣ ಹೊಣೆಯನ್ನು ವಲಯ ಕಾರ್ಯಪಡೆಗೆ ವಹಿಸಲಾಗಿದೆ. ಪಾಲಿಕೆಯ ವಲಯ ಆಯುಕ್ತರು ಕಾರ್ಯಪಡೆಯ ಮುಖ್ಯಸ್ಥರಾಗಿರುತ್ತಾರೆ. ಆಯಾ ವಲಯದ ಸಂಚಾರ ಪೊಲೀಸ್ ಇಲಾಖೆಯ ಡಿಸಿಪಿ ಅಥವಾ ಎಸಿಪಿ ದರ್ಜೆಯ ಅಧಿಕಾರಿ ಮತ್ತು ಸಾರಿಗೆ ಇಲಾಖೆ ಅಧಿಕಾರಿ (ಆರ್‌ಟಿಒ/ಎಆರ್‌ಟಿಒ) ಇದರ ಸದಸ್ಯರಾಗಿರುತ್ತಾರೆ. ಪಾರ್ಕಿಂಗ್ ವ್ಯವಸ್ಥೆಯನ್ನು ಆಗಾಗ ಪರಿಶೀಲಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡುವ ಜವಾಬ್ದಾರಿಯೂ ಕಾರ್ಯಪಡೆಯದ್ದಾಗಿರಲಿದೆ.

**ಉನ್ನತ ಸಮಿತಿ:** ನಗರದ ಪಾರ್ಕಿಂಗ್ ವ್ಯವಸ್ಥೆಗೆ ಸಂಬಂಧಿಸಿದ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಯೋಜನೆ ರೂಪಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ನೇತೃತ್ವದಲ್ಲಿ ಉನ್ನತ ಸಮಿತಿಯನ್ನು ರಚಿಸುವ ಹಾಗೂ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರು, ಸಂಚಾರ ಪೊಲೀಸ್ ಇಲಾಖೆ ಹೆಚ್ಚುವರಿ ಕಮಿಷನರ್ ಅವರನ್ನು ಸಮಿತಿ ಸದಸ್ಯರನ್ನಾಗಿ ನೇಮಿಸುವ ಪ್ರಸ್ತಾವ ಕರಡಿನಲ್ಲಿತ್ತು. ಈಗ ಈ ಸಮಿತಿಗೆ ಬಿಡಿಎ ಆಯುಕ್ತರನ್ನು ಸೇರ್ಪಡೆ ಮಾಡಲಾಗಿದೆ. ಡಲ್ಟ್ ಆಯುಕ್ತರು ಈ ಸಮಿತಿಯ ಸಂಚಾಲಕ ಸದಸ್ಯರಾಗಿರುತ್ತಾರೆ. ಪಾರ್ಕಿಂಗ್ ಶುಲ್ಕ ಪರಿಷ್ಕರಣೆ, ಸೇವೆ ನೀಡುವ ಏಜೆನ್ಸಿಗಳ ಜೊತೆ ಸಮನ್ವಯ ಈ ಸಮಿತಿಯ ಹೊಣೆ.

ಉನ್ನತ ಸಮಿತಿಯು ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ (ಬಿಎಂಎಲ್‌ಟಿಎ) ಅಥವಾ ಏಕೀಕೃತ ಮಹಾನಗರ ಸಾರಿಗೆ ಪ್ರಾಧಿಕಾರ (ಯುಎಂಟಿಎ) ರಚನೆಯಾಗುವವರೆಗೆ ಮಾತ್ರ ಉನ್ನತ ಸಮಿತಿ ಅಸ್ತಿತ್ವದಲ್ಲಿರಲಿದೆ. ನಂತರ ಆ ಪ್ರಾಧಿಕಾರವೇ ಉನ್ನತ ಸಮಿತಿಯ ಜವಾಬ್ದಾರಿ ನಿಭಾಯಿಸಲಿದೆ ಎಂದು ಕರಡಿನಲ್ಲಿ ಸ್ಪಷ್ಟಪಡಿಸಲಾಗಿತ್ತು.

'ಮನೆ ಮುಂದಿನ ರಸ್ತೆಯಲ್ಲಿ ವಾಹನ ನಿಲ್ಲಿಸುವುದಕ್ಕೆ ಶುಲ್ಕ ವಿಧಿಸುವುದು, ಮನೆಯಲ್ಲಿ ಜಾಗ ಇಲ್ಲದವರು ವಾಹನ ಖರೀದಿಸುವುದನ್ನು ನಿರ್ಬಂಧಿಸುವಂತಹ ಅಂಶಗಳು ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಹೊಡೆತ ನೀಡಬಹುದು ಎಂಬ ಆತಂಕ ಸರ್ಕಾರಕ್ಕಿದೆ. ಹಾಗಾಗಿ ಈ ನಿಬಂಧನೆಗಳನ್ನು ಸಡಿಲಗೊಳಿಸಲು ಸರ್ಕಾರ ಮುಂದಾಗಿದೆ' ಎನ್ನಲಾಗಿದೆ.

**ಅಂಕಿ-ಅಂಶಗಳು**

**84.6** ಲಕ್ಷ, ನಗರದಲ್ಲಿ ನೋಂದಣಿಯಾಗಿರುವ ವಾಹನಗಳ ಸಂಖ್ಯೆ

**10%** ನಗರದಲ್ಲಿ ವಾಹನ ನೋಂದಣಿಯ ವರ್ಷವಾರು ಪ್ರಗತಿ

**15** ಮೀ/ ಗಂಟೆ ನಗರದಲ್ಲಿ ದಟ್ಟಣೆ ಅವಧಿಯಲ್ಲಿ ವಾಹನ ಸಂಚಾರದ ಸರಾಸರಿ ವೇಗ

**13,000** ಎಕರೆ ಶೇ 50ರಷ್ಟು ವಾಹನಗಳ ಪಾರ್ಕಿಂಗ್‌ಗೆ ಸೌಕರ್ಯ ಒದಗಿಸಲು ಬೇಕಾಗುವ ಜಾಗ

## ಧ್ಯೇಯೋದ್ದೇಶಗಳು

- ಅಸ್ತವ್ಯಸ್ತ ಪಾರ್ಕಿಂಗ್ ಬದಲು ವಾಹನಗಳ ವ್ಯವಸ್ಥಿತ ನಿಲುಗಡೆಗೆ ಕ್ರಮ
- ಎಲ್ಲೆಂದರಲ್ಲಿ ಉಚಿತವಾಗಿ ವಾಹನಗಳ ನಿಲುಗಡೆ ಪ್ರವೃತ್ತಿಗೆ ಕಡಿವಾಣ ಹಾಕಿ, ಹಣ ಪಾವತಿಸಿ ವಾಹನ ನಿಲ್ಲಿಸುವ ವ್ಯವಸ್ಥೆಗೆ ಉತ್ತೇಜನ.
- ಪಾರ್ಕಿಂಗ್ ತಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಪಿಪಿಪಿ/ ಖಾಸಗಿ ಸಹಭಾಗಿತ್ವ ಉತ್ತೇಜಿಸುವುದು
- ಪಾರ್ಕಿಂಗ್ ನಿಯಮಗಳ ಸಕ್ರಿಯ ನಿರ್ವಹಣೆ

| Date | 01-12-2020 |
|---|---|
| Page No | 3 |

### ಬೆಸ್ಕಾಂಗೆ ಪತ್ರ ಬರೆದ ಬಿಬಿಎಂಪಿ • ಸರ್ಕಾರದ ಅನುಮತಿ ಬಳಿಕ ಜಾರಿ – ಆಯುಕ್ತ ಮಂಜುನಾಥ ಪ್ರಸಾದ್

# ವಿದ್ಯುತ್ ಬಿಲ್ ಜೊತೆ ಕಸ ನಿರ್ವಹಣೆ ಶುಲ್ಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕಸ ನಿರ್ವಹಣೆಗಾಗಿ ವಿಧಿಸುವ ಬಳಕೆದಾರರ ಸೇವಾ ಶುಲ್ಕವನ್ನು ಆಸ್ತಿ ತೆರಿಗೆ ಜೊತೆಗೆ ಸಂಗ್ರಹಿಸಲು ನಿರ್ಧರಿಸಿದ್ದ ಬಿಬಿಎಂಪಿ, ಅದರ ಬದಲು ವಿದ್ಯುತ್ ಬಿಲ್ ಜೊತೆಗೆ ಸಂಗ್ರಹಿಸುವ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿದೆ.

ಈ ಕುರಿತು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಇತ್ತೀಚೆಗೆ ಪತ್ರ ಬರೆದಿದ್ದಾರೆ.

'ಭಾರಿ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಹೊರತುಪಡಿಸಿ ಉಳಿದವರು ಉತ್ಪಾದಿಸುವ ಕಸದ ವಿಲೇವಾರಿಯನ್ನು ಪಾಲಿಕೆ ನಿರ್ವಹಿಸುತ್ತಿದೆ. ಇದರ ಒಟ್ಟು ವೆಚ್ಚದಲ್ಲಿ ಶೇ 5 ರಿಂದ ಶೇ 6ರಷ್ಟು ಮಾತ್ರ ಕಸದ ಉಪಕರದ ಮೂಲಕ ಸಂಗ್ರಹವಾಗುತ್ತಿದೆ. ಈ ವೆಚ್ಚದ ವ್ಯತ್ಯಾಸವನ್ನು ಕಸ ನಿರ್ವಹಣೆ ಬಳಕೆದಾರರಿಂದ ಸೇವಾ ಶುಲ್ಕದ ರೂಪದಲ್ಲಿ ಸಂಗ್ರಹಿಸಿ ಸರಿದೂಗಿಸುವ ಅವಶ್ಯಕತೆ ಇದೆ. 2016ರ ಕಸ ನಿರ್ವಹಣೆ ನಿಯಮಗಳೂ ಕಸ ಉತ್ಪಾದಿಸುವವರೇ ಅದರ ವೆಚ್ಚ ಭರಿಸಬೇಕು ಎಂದು ಪ್ರತಿಪಾದಿಸುತ್ತದೆ. ಬೀದಿ ಗುಡಿಸುವ ಕಾರ್ಯದ ನಿರ್ವಹಣೆಗೆ ವಾರ್ಷಿಕ ₹ 380 ಕೋಟಿ ವೆಚ್ಚವಾಗುತ್ತಿದೆ. ಉಪಕರದ ಮೂಲಕ ಸಂಗ್ರಹವಾಗುವ ₹ 43 ಕೋಟಿಯನ್ನು ಈ ಉದ್ದೇಶಕ್ಕೆ ಬಳಸಲಾಗುತ್ತಿದೆ' ಎಂದು ಆಯುಕ್ತರು ತಿಳಿಸಿದರು..

2019ರ ಜು.30ರಂದು ಪಾಲಿಕೆ ಸಭೆಯಲ್ಲಿ ಅಂಗೀಕಾರಗೊಂಡ ಬಿಬಿಎಂಪಿಯ ಪೌರ ಕಸ ನಿರ್ವಹಣೆ ಉಪನಿಯಮಗಳ ಕುರಿತು ರಾಜ್ಯಪತ್ರದಲ್ಲಿ 2020 ಜೂನ್ 4ರಂದು ಅಧಿಸೂಚನೆ ಪ್ರಕಟವಾಗಿದೆ. ನಿತ್ಯ 100 ಕೆ.ಜಿಗಿಂತ ಕಡಿಮೆ ಕಸ ಉತಾದಿಸುವ ಮನೆಗಳು /ಕಟ್ಟಡ ಸಮುಚ್ಚಯಗಳು ಮತ್ತು 100 ಕೆ.ಜಿ ಗಿಂತ ಕಡಿಮೆ ಕಸ ಉತ್ಪಾದಿಸುವ ಹಾಗೂ 5000 ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ವಾಣಿಜ್ಯ ಮತ್ತು ಇತರೆ ಕಟ್ಟಡಗಳಿಗೆ ಇದರ ನಿಯಮ 15 ಇ ಮತ್ತು ಜೆಡ್ ಎಫ್ ಪ್ರಕಾರ ಬಳಕೆದಾರರ ಶುಲ್ಕ ನಿಗದಿ ಮಾಡಲಾಗಿದೆ. ಅದರ ಪ್ರಕಾರ ಪ್ರತಿ ಮನೆ ಮತ್ತು ವಾಣಿಜ್ಯ ಕಟ್ಟಡಗಳಿಂದ (ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ) ಪ್ರತಿ ತಿಂಗಳೂ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಬೇಕಾಗಿರುತ್ತದೆ.

'ಕಸ ನಿರ್ವಹಣೆಯ ಬಳಕೆದಾರರ ಶುಲ್ಕವನ್ನು ಪಾಲಿಕೆ ವತಿಯಿಂದ ಸಂಗ್ರಹಿಸಲು ಹೆಚ್ಚಿನ ಮಾನವ ಸಂಪನ್ಮೂಲ ಬೇಕಾಗುತ್ತದೆ. ಕಸ ಉತ್ಪಾದಕರು ಶುಲ್ಕ ಪಾವತಿಸದೆ ಇದ್ದಲ್ಲಿ ದಂಡ ವಿಧಿಸಿ, ವಸೂಲು ಮಾಡುವ ವ್ಯವಸ್ಥೆ ಪಾಲಿಕೆಯಲ್ಲಿಲ್ಲ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಈಗಾಗಲೇ ಪ್ರತಿ ತಿಂಗಳೂ ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಂದ ವಿದ್ಯುತ್ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುತ್ತಿದೆ. ಕಸ ನಿರ್ವಹಣೆಯ ಬಳಕೆದಾರರ ಶುಲ್ಕವನ್ನೂ ಇದರ ಜೊತೆಗೇ ಸಂಗ್ರಹಿಸುವುದು ಸೂಕ್ತ' ಎಂದು ಬಿಬಿಎಂಪಿ ಆಯುಕ್ತರು ಸಲಹೆ ನೀಡಿದ್ದಾರೆ.

'ಪಾಲಿಕೆಯಿಂದ ಕಸ ಉತ್ಪಾದಕರನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ. ಇದರ ದತ್ತಾಂಶ ಸಂಗ್ರಹದ ಅರ್ಜಿಯ ಜೊತೆಗ ಪ್ರತಿ ಮನೆಗಳ ಮತ್ತು ವಾಣಿಜ್ಯ ಕಟ್ಟಡಗಳಿನ ವಿದ್ಯುತ್ ಮೀಟರ್‌ನ ಆರ್.ಆರ್. ಸಂಖ್ಯೆಯನ್ನೂ ಸಂಗ್ರಹಿಸಲಾಗುತ್ತದೆ. ಕಸ ಉತ್ಪಾದಿಸುವವರ ಮ್ಯಾಪಿಂಗ್ ಕುರಿತ ವಿವರವನ್ನು ಬೆಸ್ಕಾಂ ತಂತ್ರಾಂಶದಲ್ಲಿ ಅಡಕಗೊಳಿಸಿ ಕಸ ನಿರ್ವಹಣೆ ಬಳಕೆದಾರರ ಶುಲ್ಕ ಸಂಗ್ರಹಿಸಬಹುದು. ಸಂಗ್ರಹವಾಗುವ ಮೊತ್ತದಲ್ಲಿ ಬೆಸ್ಕಾಂಗೂ ಸೇವಾ ಶುಲ್ಕ ಪಾವತಿಸಲಾಗುತ್ತದೆ' ಎಂದೂ ಆಯುಕ್ತರು ಪ್ರಸ್ತಾಪಿಸಿದ್ದಾರೆ.

ವಿದ್ಯುತ್ ಮೀಟರ್‌ನ ಆರ್.ಆರ್.ಸಂಖ್ಯೆ ಬಳಸಿ ಕಸ ಬಳಕೆದಾರರ ಶುಲ್ಕ ಸಂಗ್ರಹಿಸುವ ಕುರಿತು ಅಭಿಪ್ರಾಯ ಹಾಗೂ ಅನುಮತಿ ನೀಡಬೇಕು ಎಂದು ಆಯುಕ್ತರು ಪತ್ರದಲ್ಲಿ ಕೋರಿದ್ದಾರೆ.



**ಕಸ ನಿರ್ವಹಣೆ ಬಳಕೆದಾರರ ಶುಲ್ಕವನ್ನು ವಿದ್ಯುತ್ ಬಿಲ್ ಜೊತೆಗೆ ಸಂಗ್ರಹಿಸುವುದು ಪ್ರಸ್ತಾವನೆ ಹಂತದಲ್ಲಿದೆ. ಸರ್ಕಾರದ ಅನುಮತಿ ಸಿಕ್ಕ ಬಳಿಕವಷ್ಟೇ ಇದು ಜಾರಿಯಾಗಲಿದೆ**

**ಎನ್.ಮಂಜುನಾಥ ಪ್ರಸಾದ್**

ಆಯುಕ್ತರು, ಬಿಬಿಎಂಪಿ

## ಪ್ರತಿವರ್ಷ ಶೇ 5ರಷ್ಟು ಹೆಚ್ಚಳ?

ಬಿಬಿಎಂಪಿ ಕಸ ನಿರ್ವಹಣೆ ಉಪನಿಯಮ 2016ರ ಪ್ರಕಾರ ಕಸ ನಿರ್ವಹಣೆ ಬಳಕೆದಾರರ ಶುಲ್ಕವು ಪ್ರತಿ ವರ್ಷ ಏಪ್ರಿಲ್ 1ರಿಂದ ತನ್ನಿಂದ ತಾನೇ ಶೇ 5ರ ಪ್ರಮಾಣದಲ್ಲಿ ಏರಿಕೆ ಆಗಲಿದೆ. ನಿಗದಿತ ಅವಧಿಯಲ್ಲಿ ಶುಲ್ಕ ಪಾವತಿಸದಿದ್ದರೆ ಮಾಸಿಕ ಶೇ 2ರಷ್ಟು ಬಡ್ಡಿ ಸೇರಿಸಿ ವಸೂಲಿ ಮಾಡಲು ಹಾಗೂ ಅಗತ್ಯವೆನಿಸಿದರೆ ಸುಸ್ತಿದಾರರಿಗೆ ಕಸ ನಿರ್ವಹಣಾ ಸೇವೆ ರದ್ದುಪಡಿಸುವುದಕ್ಕೂ ನಿಯಮದಲ್ಲಿ ಅವಕಾಶವಿದೆ. ಸ್ಥಳದಲ್ಲೇ ಸಾವಯವ ಗೊಬ್ಬರ (ಕಾಂಪೋಸ್ಟ್) ತಯಾರಿ ಸುವ ಕಸ ಉತ್ಪಾದಕರಿಗೆ ಹಾಗೂ ಬಯೋಮೀಥನೈಸೇಷನ್ ಮಾಡುವವರಿಗೆ ಬಳಕೆದಾರರ ಶುಲ್ಕದಲ್ಲಿ ಶೇ 50ರಷ್ಟು ರಿಯಾಯಿತಿ ಸಿಗಲಿದೆ.

## ಶುಲ್ಕ ಯಾರಿಗೆ ಎಷ್ಟು?

| ಪ್ರತಿ ಮನೆಗೆ | ₹200 |
|---|---|
| ವಸತಿ ಕಟ್ಟಡಗಳಿಗೆ (ಮೇಲ್ಭಾಯದ ವಿಸ್ತೀರ್ಣದ ಆಧಾರದಲ್ಲಿ) | |
| ವಿಸ್ತೀರ್ಣ (ಚ.ಅಡಿ) | ಶುಲ್ಕ ₹ ಗಳಲ್ಲಿ (ತಿಂಗಳಿಗೆ) |
| 1000 ದವರೆಗೆ | 10 |
| 1001-3000 | 30 |
| 3000 ಮೇಲ್ಪಟ್ಟು | 50 |
| ವಾಣಿಜ್ಯ ಕಟ್ಟಡಗಳಿಗೆ | |
| 1000ದವರೆಗೆ | 50 |
| 1001-5000 | 100 |
| 5000 ಮೇಲ್ಪಟ್ಟು | 200 |
| ಕೈಗಾರಿಕಾ ಕಟ್ಟಡಗಳಿಗೆ | |
| 1000ದವರೆಗೆ | 50 |
| 1001-5000 | 200 |
| 5000 ಮೇಲ್ಪಟ್ಟು | 300 |

| ಹೋಟೆಲ್, ಕಲ್ಯಾಣ ಮಂಟಪ, ಆರೋಗ್ಯಸೇವಾ ಸಂಸ್ಥೆ ಕಟ್ಟಡಗಳಿಗೆ | |
|---|---|
| 10,000ದವರೆಗೆ | 300 |
| 10,000-50,000 | 500 |
| 50,000 ಮೇಲ್ಪಟ್ಟು | 600 |
| ವಾಣಿಜ್ಯ ಮತ್ತು ಸಾಂಸ್ಥಿಕ ಉತ್ಪಾದಕರು (ನಿತ್ಯ ಕಸ ಉತ್ಪಾದನೆ ಆಧಾರದಲ್ಲಿ) | |
| ಕಸದ ತೂಕ (ಕೆ.ಜಿ.ಗಳಲ್ಲಿ) | ಶುಲ್ಕ (₹ಗಳಲ್ಲಿ) |
| 5ಕ್ಕಿಂತ ಕಡಿಮೆ | 500 |
| 5-10 | 1,400 |
| 10-25 | 3,500 |
| 25-50 | 7,000 |
| 50-100 | 14,000 |
| ಖಾಲಿ ನಿವೇಶನಕ್ಕೆ | ಪ್ರತಿ ಚ.ಅಡಿಗೆ ₹ 0.20 |

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 01-12-2020 |
| --- | --- |
| Page No | 3 |

# ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**3,69,734** ಒಟ್ಟು ಸೋಂಕಿತರು

**3,48,348** ಗುಣಮುಖರಾದವರು

**17,248** ಸಕ್ರಿಯ ಪ್ರಕರಣ




## ಸೋಮವಾರದ ಏರಿಕೆ

**444** ದೃಢಪಟ್ಟ ಪ್ರಕರಣ

**1,509** ಗುಣಮುಖ | **6** ಸಾವು

ಕನ್ನಡಪ್ರಭ

| Date | 01-12-2020 |
|---|---|
| Page No | 2 |



# ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ: ಕಠಿಣ ಕ್ರಮ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಧೂಮಪಾನದಿಂದ ದೇಹದ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಕೊರೋನಾ ಸೋಂಕು ತಗುಲುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಆರೋಗ್ಯ ನಿರೀಕ್ಷಕರಿಗೆ ಸೂಚಿಸಿದರು. ನಗರದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ (ಎನ್‌ಟಿಸಿಪಿ) ತಂಬಾಕು ಬಳಕೆಯಿಂದಾಗುವ ದುಷ್ಪರಿಣಾಮ ಹಾಗೂ 'ಕೋಟ್ಪಾ 2003 ಕಾಯ್ದೆ' ಅನುಷ್ಠಾನ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ ಅಧಿಕಾರಿ ಡಾ। ಮನೋರಂಜನ್, ಧೂಮಪಾನ ಮುಕ್ತ ಬೆಂಗಳೂರು ಅಭಿಯಾನದ ನಿರ್ದೇಶಕಿ ಡಾ। ಬಿ.ಎಸ್.ತ್ರಿವೇಣಿ, ಕಾರ್ಯಕ್ರಮ ವ್ಯವಸ್ಥಾಪಕ ಎನ್.ಜಿ.ಅಚ್ಯುತ ಇನ್ನಿತರರು ಇದ್ದರು.

ಕನ್ನಡಪ್ರಭ

| Date | 01-12-2020 |
| --- | --- |
| Page No | 2 |

# 6 ತಿಂಗಳ ಬಳಿಕ ಸೋಂಕಿತರ ಸಂಖ್ಯೆ 500ರ ಒಳಗೆ ಇಳಿಕೆ

## ಕೊರೋನಾದಿಂದ 3.48 ಲಕ್ಷ ಮಂದಿ ಗುಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಐದು ತಿಂಗಳ ನಂತರ ಕೊರೋನಾ ಸೋಂಕಿನ ಪ್ರಕರಣಗಳು ಅತ್ಯಂತ ಕಡಿಮೆಯಲ್ಲಿ ದಾಖಲಾಗಿದೆ. ಸೋಮವಾರ 444 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 1,509 ಮಂದಿ ಗುಣಮುಖರಾಗಿದ್ದು, ಆರು ಮಂದಿ ಮೃತಪಟ್ಟಿದ್ದಾರೆ.

ಜೂನ್ 27 ರಂದು 596 ಪ್ರಕರಣ ಪತ್ತೆಯಾಗಿತ್ತು. ನಂತರದ ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ಸಾವಿರ ದಾಟಿತ್ತು. ನಂತರ ನ. 16 ರಂದು 597 ಜನರಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಇದಾದ ನಂತರ ಸಾವಿರದೊಳಗೆ ಸೋಂಕಿನ ಪ್ರಕರಣಗಳು ಕಾಣಿಸಿಕೊಳ್ಳುತ್ತಿತ್ತು. ನಗರದಲ್ಲಿ ಈವರೆಗಿನ ಸೋಂಕಿತರ ಸಂಖ್ಯೆ 3,69,734ಕ್ಕೆ ಏರಿಕೆಯಾಗಿದೆ. ಗುಣಮುಖರ ಸಂಖ್ಯೆ 3,48,348 ತಲುಪಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

**ಆರು ಮಂದಿ ಸಾವು:** ನಗರದಲ್ಲಿ ಸೋಮವಾರ ಆರು ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಈವರೆಗೆ 4,137 ಜನರು ಸಾವಿಗೀಡಾಗಿದ್ದಾರೆ. ಸದ್ಯ 17,248 ಸಕ್ರಿಯ ಪ್ರಕರಣಗಳಿದ್ದು, ವಿವಿಧ ಆಸ್ಪತ್ರೆ, ಆರೈಕೆ ಕೇಂದ್ರ, ಹಾಗೂ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 181 ಸೋಂಕಿತರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿದ್ದು, ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

**ನವೆಂಬರ್ ಕೊರೋನಾ ವಿವರ:** ನವೆಂಬರ್ ತಿಂಗಳಲ್ಲಿ ಒಟ್ಟು 33,265 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, 50,203 ಮಂದಿ ಗುಣಮುಖರಾಗಿದ್ದಾರೆ.

ಕನ್ನಡಪ್ರಭ

| Date | 01-12-2020 |
|---|---|
| Page No | 3 |

# ನಿರೀಕ್ಷಿತ ಗುರಿ ಮುಟ್ಟದ ಪ್ರತ್ಯೇಕ ಕಸ ಸಂಗ್ರಹ

## ಯೋಜನೆ ಅನುಷ್ಠಾನಗೊಂಡು ಎರಡೂವರೆ ತಿಂಗಳು ಕಳೆದರೂ 38 ವಾರ್ಡ್‌ಲ್ಲಿ ಮಾತ್ರ ಜಾರಿ | ಉಳಿದೆಡೆ ಮಿಶ್ರ ಕಸ ಸಂಗ್ರಹ

• **ವಿಶೇಷ ವರದಿ**

**ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನ ತ್ಯಾಜ್ಯ ವಿಲೇವಾರಿ ಸಮಸ್ಯೆ ಶಾಶ್ವತ ಪರಿಹಾರಕ್ಕೆ ಬಿಬಿಎಂಪಿ ಆರಂಭಿಸಿದ ಪ್ರತ್ಯೇಕ ಕಸ ಸಂಗ್ರಹಿಸುವ ವ್ಯವಸ್ಥೆ ಅನುಷ್ಠಾನಗೊಂಡು ಎರಡೂವರೆ ತಿಂಗಳು ಕಳೆದರೂ ನಿರೀಕ್ಷಿತ ಗುರಿ ಮುಟ್ಟಲು ಸಾಧ್ಯವಾಗಿಲ್ಲ.

ಗೋವಿಂದರಾಜ ನಗರ ವಾರ್ಡ್‌ನಲ್ಲಿ ಸೆ.15ರಂದು ಬಿಬಿಎಂಪಿ ಆಯುಕ್ತರು ಪ್ರತ್ಯೇಕ ತ್ಯಾಜ್ಯ ಸಂಗ್ರಹಿಸುವ ವ್ಯವಸ್ಥೆಗೆ ಚಾಲನೆ ನೀಡಿದರು. ಅಲ್ಲಿಂದ ಈವರೆಗೆ ಬಿಬಿಎಂಪಿಯ 198 ವಾರ್ಡ್‌ಗಳ ಪೈಕಿ ಕೇವಲ 38 ವಾರ್ಡ್‌ಗಳಲ್ಲಿ ಮಾತ್ರ ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯವನ್ನು ಮನೆ ಮನೆಯಿಂದ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದೆ. ಇನ್ನುಳಿದ ವಾರ್ಡ್‌ಗಳಲ್ಲಿ ಈ ಹಿಂದೆ ತ್ಯಾಜ್ಯ ಸಂಗ್ರಹಿಸುವ ವ್ಯವಸ್ಥೆಯೇ ಜಾರಿಯಲ್ಲಿದೆ. ಈವರೆಗೆ 79 ವಾರ್ಡ್‌ಗಳಲ್ಲಿ ಪ್ರತ್ಯೇಕವಾಗಿ ಕಸ ಸಂಗ್ರಹಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. ಈ ಪೈಕಿ 38 ವಾರ್ಡ್‌ಗಳಲ್ಲಿ ಮಾತ್ರ ಗುತ್ತಿಗೆದಾರರು ಕೆಲಸ ಪ್ರಾರಂಭಿಸಿದ್ದಾರೆ. ಉಳಿದಂತೆ 12 ವಾರ್ಡ್‌ಗಳಲ್ಲಿ ಪ್ರಾಯೋಗಿಕ ಹಂತ ಪೂರ್ಣಗೊಂಡಿದ್ದು, ಕೆಲಸ ಆರಂಭಿಸಬೇಕಾಗಿದೆ. 29 ವಾರ್ಡ್‌ಗಳಲ್ಲಿ ಪ್ರಾಯೋಗಿಕ ಹಂತಕ್ಕೆ ಚಾಲನೆ ನೀಡಬೇಕಿದೆ.



### ಜನಪ್ರತಿನಿಧಿಗಳ ಅಡ್ಡಗಾಲು?

2018ರಲ್ಲಿಯೇ ಪ್ರತ್ಯೇಕ ತ್ಯಾಜ್ಯ ಸಂಗ್ರಹಿಸುವ ಟೆಂಡರ್ ಆಹ್ವಾನಿಸಲಾಗಿತ್ತು. ಅಲ್ಲಿಂದ ಈವರೆಗೆ ಜನಪ್ರತಿನಿಧಿಗಳು ಹಾಗೂ ಗುತ್ತಿಗೆದಾರರ ಸಾಕಷ್ಟು ವಿರೋಧ ವ್ಯಕ್ತಪಡಿಸುತ್ತಲೇ ಬರುತ್ತಿದ್ದಾರೆ. ಸಾಕಷ್ಟು ವಾರ್ಡ್‌ಗಳು ಗುತ್ತಿಗೆ ಕೈ ತಪ್ಪುವ ಹಿನ್ನೆಲೆಯಲ್ಲಿ ಪ್ರತ್ಯೇಕ ಟೆಂಡರ್ ಜಾರಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಹೀಗಾಗಿ, ಪ್ರತ್ಯೇಕ ಕಸ ಸಂಗ್ರಹಿಸುವ ವ್ಯವಸ್ಥೆ ಹಿನ್ನಡೆಯಾಗುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ.



**ನಿಧಾನಗತಿಯಲ್ಲಿ ನಗರದ ವಿವಿಧ ವಾರ್ಡ್‌ಗಳಲ್ಲಿ ಪ್ರತ್ಯೇಕ ಕಸ ವಿಲೇವಾರಿ ವ್ಯವಸ್ಥೆ ಜಾರಿಯಾಗುತ್ತಿದೆ. ಈಗಾಗಲೇ 38 ವಾರ್ಡ್‌ಗಳಲ್ಲಿ ಜಾರಿಯಾಗಿದ್ದು, ಹಸಿ ಮತ್ತು ಒಣ ತ್ಯಾಜ್ಯ ವಿಂಗಡಣೆ ಪ್ರಮಾಣ ಹೆಚ್ಚಾಗಿದೆ. ಡಿಸೆಂಬರ್ ಮೊದಲ ವಾರದಲ್ಲಿ ಮತ್ತಷ್ಟು ವಾರ್ಡ್‌ಗಳಲ್ಲಿ ಪ್ರತ್ಯೇಕ ತ್ಯಾಜ್ಯ ಸಂಗ್ರಹಿಸುವ ವ್ಯವಸ್ಥೆ ಜಾರಿಗೆ ಬರಲಿದೆ.**

• **ಡಿ.ರಂದೀಪ್** ವಿಶೇಷ ಆಯುಕ್ತರು, ಬಿಬಿಎಂಪಿ ಘನತ್ಯಾಜ್ಯ ವಿಭಾಗ.

**25 ವಾರ್ಡ್‌ಗೆ ಮರು ಟೆಂಡರ್:** ಬಿಬಿಎಂಪಿಯ ಅಂದಾಜು ಮೊತ್ತಕ್ಕಿಂತ ಅಧಿಕ ಮೊತ್ತಕ್ಕೆ ಟೆಂಡರ್ ಬಿಡ್ ಮತ್ತು ವಿವಿಧ ತಾಂತ್ರಿಕ ಸಮಸ್ಯೆ ಎದುರಾದ 25 ವಾರ್ಡ್‌ಗಳಿಗೆ ಕಳೆದ ನ.23ರಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ಮರು ಟೆಂಡರ್ ಆಹ್ವಾನಿಸಲಾಗಿದೆ. ನ್ಯಾಯಾಲಯದ ಆದೇಶದಂತೆ 25 ವಾರ್ಡ್‌ಗಳ ಟೆಂಡರ್ ಪ್ರಕ್ರಿಯೆ ಮರು ಮೌಲ್ಯಮಾಪನ ನಡೆಸಬೇಕಾಗಿದೆ. ಎಂಟು ವಾರ್ಡ್‌ಗಳ ಗುತ್ತಿಗೆ ಅನುಮೋದನೆ ಬಾಕಿ ಇದೆ. 12 ವಾರ್ಡ್‌ಗಳಲ್ಲಿ ಗುತ್ತಿಗೆದಾರರು ಕಾಮಗಾರಿ ನಡೆಯುವ ಬಗ್ಗೆ ಒಪ್ಪಿಗೆ ಪತ್ರ ಸಲ್ಲಿಸಿಲ್ಲ. 8 ವಾರ್ಡ್‌ನ ಗುತ್ತಿಗೆದಾರರು ಕಾಮಗಾರಿ ನಡೆಸಲು ಒಪ್ಪಿಗೆ ಸೂಚಿಸಿದ್ದು, ಕಾರ್ಯಕ್ಷಮತೆ ಪ್ರಮಾಣ ಪತ್ರ ಸಲ್ಲಿಸಿಲ್ಲ. ಇನ್ನು 11 ವಾರ್ಡ್‌ಗಳಲ್ಲಿ ಟೆಂಡರ್‌ನ ಎಲ್ಲ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕೆಲಸ ಆರಂಭಿಸುವುದಕ್ಕೆ ಗುತ್ತಿಗೆ ಕಾರ್ಯಾದೇಶ ನೀಡಬೇಕಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಎಂಎಸ್‌ಜಿಪಿ ಪ್ರಕರಣ ವಜಾ:** ಬಿಬಿಎಂಪಿಯ 30 ವಾರ್ಡ್‌ಗಳಲ್ಲಿ ಎಂಎಸ್‌ಜಿಪಿ ಸಂಸ್ಥೆ ಕಸ ನಿರ್ವಹಣೆ ಮಾಡುತ್ತಿತ್ತು. ಬಿಬಿಎಂಪಿ ಪ್ರತ್ಯೇಕ ಟೆಂಡರ್ ಆಹ್ವಾನಿಸಿದಕ್ಕೆ ಸಂಬಂಧಿಸಿದಂತೆ ಎಂಎಸ್‌ಜಿಪಿ ನ್ಯಾಯಾಲಯದ ಮೊರೆ ಹೋಗಿತ್ತು. ಇದೀಗ ನ್ಯಾಯಾಲಯ ಬಿಬಿಎಂಪಿ ಪರ ತೀರ್ಪು ನೀಡಿದೆ. ಕೋರ್ಟ್ ಬಿಬಿಎಂಪಿ ಪರ ಆದೇಶ ನೀಡಿದ ಹಿನ್ನೆಲೆಯಲ್ಲಿ ಗುತ್ತಿಗೆದಾರರ ಆಯ್ಕೆ ಮಾಡಿ ಕಾರ್ಯಾದೇಶ ನೀಡಬೇಕಾಗಿದೆ. ಸದ್ಯದಲ್ಲಿ ಪ್ರಕ್ರಿಯೆ ಆರಂಭಿಸುವುದಾಗಿ ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

VK ವಿಜಯ ಕರ್ನಾಟಕ

| Date | 01-12-2020 |
| --- | --- |
| Page No | 5 |


## ರಾಜಧಾನಿಯ ಮರಗಳ ಸಮೀಕ್ಷೆಗೆ ಇನ್ನೂ ಕೂಡಿ ಬಾರದ ಮುಹೂರ್ತ

# ಕೃಷಿ ವಿವಿಗೆ ಮರ ಗಣತಿ ಕೆಲಸ

■ ನಾಗಪ್ಪ ನಾಗನಾಯಕನಹಳ್ಳಿ
ಬೆಂಗಳೂರು

nagappa.narayanappa@timesgroup.com

ಸಿಲಿಕಾನ್ ಸಿಟಿಯ ರಸ್ತೆ ಬದಿಗಳಲ್ಲಿನ ವೃಕ್ಷಗಳ ಸಮೀಕ್ಷೆಗೆ ಮುಹೂರ್ತವೇ ಕೂಡಿ ಬಂದಿಲ್ಲ. ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು ಗಣತಿ ಕೈಗೊಳ್ಳಲು ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ಕಾರ್ಯವನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ವಹಿಸಲು ಬಿಬಿಎಂಪಿ ತೀರ್ಮಾನಿಸಿದೆ.

ಬಿಬಿಎಂಪಿಯು ಈಗಾಗಲೇ ಖಾಸಗಿ ಪ್ರದೇಶಗಳು, ಉದ್ಯಾನವನಗಳು ಮತ್ತು ನಾನಾ ಸಂಸ್ಥೆಗಳ ಆವರಣದಲ್ಲಿರುವ ಮರಗಳ ಸಮೀಕ್ಷೆಯನ್ನು ಶುರು ಮಾಡಿದೆ. ಇದುವರೆಗೆ ಸುಮಾರು 45 ಸಾವಿರ ಮರಗಳ ಗಣತಿ ನಡೆಸಿದ್ದು, ಅವುಗಳ ಆರೋಗ್ಯ ಸ್ಥಿತಿ, ಪ್ರಬೇಧ ಹಾಗೂ ಇನ್ನಿತರೆ ವಿವರವನ್ನು ದಾಖಲಿಸಲಾಗಿದೆ. ಅಲ್ಲದೆ, ಮರಗಳಿಗೆ ಜಿಯೋ ಟ್ಯಾಗಿಂಗ್ ಮಾಡಲಾಗುತ್ತಿದೆ.

ಆದರೆ, ರಸ್ತೆಯ ಇಕ್ಕೆಲಗಳಲ್ಲಿನ ವೃಕ್ಷಗಳ ಗಣತಿ ಕಾರ್ಯ ಆರಂಭವಾಗಿಲ್ಲ. ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು ಕೊರೊನಾ ಸೋಂಕು ಮತ್ತು ಸಿಬ್ಬಂದಿ ಕೊರತೆಯ ನೆಪವೊಡ್ಡಿ ಗಣತಿ ಕಾರ್ಯವನ್ನು ಶುರು ಮಾಡಿಲ್ಲ.

ಹಾಗಾಗಿ, ಬಿಬಿಎಂಪಿಯ ಅರಣ್ಯ ವಿಭಾಗವು ವೃಕ್ಷಗಳ ಸಮೀಕ್ಷೆಗೆ ಯೋಜನಾ ವರದಿ ಸಿದ್ಧಪಡಿಸಿಕೊಡುವಂತೆ ಕೃಷಿ ವಿಶ್ವವಿದ್ಯಾಲಯದ ಕುಲಪತಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದೆ. ಕೃಷಿ ವಿವಿ ಸಮ್ಮತಿಸಿದರೆ, ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಗೊಳಿಸಲಾಗುತ್ತಿದೆ. ಅಲ್ಲದೆ, ಈಗಾಗಲೇ ಪಾವತಿಸಿರುವ 2 ಕೋಟಿ ರೂ.ಗಳನ್ನು ವಾಪಸ್ ಪಡೆದುಕೊಳ್ಳಲಾಗುತ್ತದೆ.

ಕರ್ನಾಟಕ ಮರಗಳ ಸಂರಕ್ಷಣಾ ಕಾಯಿದೆ-1976 ಜಾರಿಗೆ ಬಂದು 44 ವರ್ಷಗಳಾಗಿವೆ. ಆದರೆ, ಈವರೆಗೆ ಉದ್ಯಾನನಗರಿಯಲ್ಲಿನ ಮರಗಳ ಗಣತಿಯೇ ನಡೆದಿಲ್ಲ. ಪ್ರತಿ ವರ್ಷವೂ ಲಕ್ಷಗಟ್ಟಲೆ ಸಸಿಗಳನ್ನು ನೆಡಲಾಗುತ್ತಿದೆ. ಆದರೆ, ಅವುಗಳಲ್ಲಿ ಉಳಿದವುಗಳೆಷ್ಟು, ಅಳಿದವುಗಳೆಷ್ಟು ಎಂಬ ಲೆಕ್ಕವೇ ಪಾಲಿಕೆ ಬಳಿ ಇಲ್ಲ. ಈ ಹಿನ್ನೆಲೆಯಲ್ಲಿ ದತ್ತಾತ್ರೇಯ ಟಿ.ದೇವರೆ ಮತ್ತು ಬೆಂಗಳೂರು ಪರಿಸರ ಟ್ರಸ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಒಂದು ತಿಂಗಳೊಳಗೆ ಮರ ಗಣತಿ ಕಾರ್ಯವನ್ನು ಆರಂಭಿಸಬೇಕೆಂದು 2019ರ ಅ. 10ರಂದು ಆದೇಶಿಸಿತ್ತು. ಹಾಗಾಗಿ, ಪಾಲಿಕೆಯು ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತು.

ಬಿಬಿಎಂಪಿಯು ಮರಗಳ ಸಮೀಕ್ಷೆ ಮತ್ತು ರೋಗಗ್ರಸ್ಥ ಮರಗಳ ತೆರವಿಗೆ 2017-18ನೇ ಸಾಲಿನ ಆಯವ್ಯಯದಲ್ಲಿ 4 ಕೋಟಿ ರೂ., 2019-20ರಲ್ಲಿ 2 ಕೋಟಿ ರೂ. ಮೀಸಲಿಟ್ಟಿತ್ತು. ಅರಣ್ಯ ವಿಭಾಗದಲ್ಲಿನ ಸಿಬ್ಬಂದಿ ಕೊರತೆ ಮತ್ತು ತಜ್ಞರ ಅಭಾವದಿಂದಾಗಿ ಗಣತಿ ಕಾರ್ಯಕ್ಕೆ ಗ್ರಹಣ ಹಿಡಿದಿತ್ತು.

**ಮರ ವಿಜ್ಞಾನ ಸಂಸ್ಥೆಯಿಂದ ಗಣತಿ ಕಾರ್ಯ ವಿಳಂಬ**

**ಬಿಬಿಎಂಪಿಯಿಂದ 45 ಸಾವಿರ ಮರಗಳ ಸಮೀಕ್ಷೆ ಪೂರ್ಣ**

**ವೃಕ್ಷಗಳ ಆರೋಗ್ಯ ಸ್ಥಿತಿ ಅರಿಯುವ ಉದ್ದೇಶದಿಂದ ಸಮೀಕ್ಷೆ**

ವಿಕ ವಿಶೇಷ




**ವೃಕ್ಷಗಳ ಸಮೀಕ್ಷೆಗೆ 4.32 ಕೋಟಿ ರೂ.**

ಬಿಬಿಎಂಪಿಯು ಮರಗಳ ಗಣತಿ ಕಾರ್ಯಕ್ಕೆ 4.32 ಕೋಟಿ ರೂ. ವೆಚ್ಚ ಮಾಡುತ್ತಿದೆ. ನ್ಯಾಯಾಲಯಕ್ಕೆ ನೀಡಿರುವ ವಾಗ್ದಾನದಂತೆ ಮೂರು ವರ್ಷಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಲು ಯೋಜನೆ ರೂಪಿಸಿದೆ. ಗಣತಿ ಸಂದರ್ಭದಲ್ಲಿ ಮರಗಳ ಪ್ರಬೇಧ, ಅದರ ಆಯುಸ್ಸು, ಆರೋಗ್ಯ ಸ್ಥಿತಿಯ ವರದಿ ಸಿದ್ಧಪಡಿಸಲಿದೆ. ಆರೋಗ್ಯವಾಗಿರುವ ಮತ್ತು ರೋಗಗ್ರಸ್ಥ ಮರಗಳನ್ನು ಗುರುತಿಸಲಾಗುತ್ತದೆ.

ಭಾರತೀಯ ವಿಜ್ಞಾನ ಸಂಸ್ಥೆಯು 2014ರಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ನಡೆಸಿದ ಸಮೀಕ್ಷೆಯಲ್ಲಿ 14,78,412 ವೃಕ್ಷಗಳು ಪತ್ತೆಯಾಗಿದ್ದವು. ಉಪಗ್ರಹ ಆಧಾರಿತ ತಂತ್ರಜ್ಞಾನದ ಮೂಲಕ ವಾರ್ಡ್‌ವಾರು ಇರುವ ವೃಕ್ಷಗಳ ಚಿತ್ರಗಳನ್ನು ಸೆರೆ ಹಿಡಿದು, ಆರು ವಿಭಾಗಗಳಲ್ಲಿ ವಿಂಗಡಿಸಿ ಸಮೀಕ್ಷೆ ನಡೆಸಿತ್ತು. ಕೆಲವೊಂದು ವಾರ್ಡ್‌ಗಳಲ್ಲಿ 100ಕ್ಕಿಂತ ಕಡಿಮೆ ಮರಗಳಿರುವುದು ಕಂಡುಬಂದಿತ್ತು.

**ವಾರ್ಷಿಕ 7.93 ಕೋಟಿ ರೂ. ಖರ್ಚು**

ರಾಜಧಾನಿಯಲ್ಲಿನ ಮರಗಳ ನಿರ್ವಹಣೆಗಾಗಿ ಪಾಲಿಕೆಯು ನಿತ್ಯ 2,20,500 ರೂ. ವೆಚ್ಚ ಮಾಡುತ್ತಿದೆ. 21 ತಂಡಗಳಿಗೆ ತಲಾ 10,500 ರೂ.ಗಳನ್ನು ವೇತನ ರೂಪದಲ್ಲಿ ಪಾವತಿ ಮಾಡಲಾಗುತ್ತಿದೆ. ಈ ಲೆಕ್ಕಾಚಾರದಂತೆ ಮರಗಳ ತೆರವಿಗಾಗಿ ವಾರ್ಷಿಕ 7,93,80,000 ರೂ. ವ್ಯಯ ಮಾಡಲಾಗುತ್ತಿದೆ. ಇಷ್ಟಾದರೂ, ಮರಗಳಿಂದಾಗುತ್ತಿರುವ ಸಾವು-ನೋವಿನ ಪ್ರಮಾಣ ಕಡಿಮೆಯಾಗಿಲ್ಲ.

ನಗರದಲ್ಲಿನ ಮರಗಳ ಸಮೀಕ್ಷೆ ಮಾಡಿ ಕೊಡುವಂತೆ ಬಿಬಿಎಂಪಿಯು ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿನ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಲಭ್ಯತೆ ಆಧರಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

**-ಡಾ. ಎಸ್.ರಾಜೇಂದ್ರ ಪ್ರಸಾದ್**
ಕುಲಪತಿ, ಬೆಂಗಳೂರು ಕೃಷಿ ವಿವಿ

ವಿಜಯ ಕರ್ನಾಟಕ

| Date | 01-12-2020 |
| --- | --- |
| Page No | 5 |

# ಪಾರ್ಕಿಂಗ್ ನೀತಿ: ಇಂದು ಸಿಎಂ ಸಭೆ

**ಬೆಂಗಳೂರು:** ಬೆಂಗಳೂರು ನಗರಕ್ಕೆ ಪಾರ್ಕಿಂಗ್ ನೀತಿ ರೂಪಿಸುವ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ ಬಿಬಿಎಂಪಿ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಗಳ ವಿಧಾನಸೌಧದ ಕೊಠಡಿಯಲ್ಲಿ ಸಭೆ ನಡೆಯಲಿದೆ. ನಗರಕ್ಕೆ ಪಾರ್ಕಿಂಗ್ ನೀತಿ ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದು ಸೂಕ್ತ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ.

VK ವಿಜಯ ಕರ್ನಾಟಕ

| Date | 01-12-2020 |
| --- | --- |
| Page No | 5 |

# ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೈಕೋರ್ಟ್ ಎಚ್ಚರಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಗೋವಿಂದರಾಜನಗರದ ಮಸೀದಿಯಲ್ಲಿ ಅಕ್ರಮವಾಗಿ ಧ್ವನಿವರ್ಧಕ ಬಳಕೆ ಮಾಡುತ್ತಿರುವುದರ ವಿರುದ್ಧ ಕ್ರಮ ಕೈಗೊಳ್ಳದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಹೈಕೋರ್ಟ್ ಸೋಮವಾರ ಎಚ್ಚರಿಕೆ ನೀಡಿದೆ.

ಅಲ್ಲದೆ, ಫೆಬ್ರವರಿ ತಿಂಗಳಲ್ಲೇ ಆದೇಶ ನೀಡಿದ್ದರೂ ಕ್ರಮ ಕೈಗೊಳ್ಳದೇ ಇರುವುದನ್ನು ಸಹಿಸಲಾಗದು. ಇನ್ನೊಂದು ವಾರದಲ್ಲಿ ಕ್ರಮ ಕೈಗೊಂಡು ಕೋರ್ಟ್ ಆದೇಶ ಪಾಲಿಸದಿದ್ದರೆ ನ್ಯಾಯಾಂಗ ನಿಂದನೆಯಡಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ಮಂಡಳಿಯ ಅಧ್ಯಕ್ಷರಿಗೆ ಎಚ್ಚರಿಕೆ ನೀಡಿತು.

ನಗರದ ಗೋವಿಂದರಾಜನಗರ ಮಸೀದಿಯಲ್ಲಿ ಧ್ವನಿವರ್ಧಕ ಬಳಸುತ್ತಿರುವುದನ್ನು ಆಕ್ಷೇಪಿಸಿ ವಕೀಲೆ ಸುಮಂಗಲಾ ಎ. ಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

''ಸೋಮವಾರ ಬೆಳಗ್ಗೆ ಕೂಡ ಮಸೀದಿಯಲ್ಲಿ ಧ್ವನಿವರ್ಧಕ ಬಳಕೆ ಮಾಡಲಾಗಿದೆ. ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ'' ಎಂದು ಅರ್ಜಿದಾರರು ನ್ಯಾಯಪೀಠಕ್ಕೆ ತಿಳಿಸಿದರು.

ಅದಕ್ಕೆ ನ್ಯಾಯಪೀಠ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು



**ಗೋವಿಂದರಾಜನಗರದ ಮಸೀದಿಯಲ್ಲಿ ಅಕ್ರಮ ಧ್ವನಿವರ್ಧಕ ಬಳಕೆ**

ಕಳೆದ ಫೆ.20ರಂದು ನೀಡಿದ್ದ ಆದೇಶ ಪಾಲಿಸದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

''ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಈವರೆಗೂ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಮುಂದಾಗಿಲ್ಲ, ಕಡೇ ಪಕ್ಷ ಧ್ವನಿವರ್ಧಕಗಳ ಶಬ್ದ ಎಷ್ಟಿದೆ ಎಂಬ ಪರೀಕ್ಷೆಯನ್ನೂ ನಡೆಸಿಲ್ಲ, ಮಂಡಳಿಯ ಅಧಿಕಾರಿಗಳಿಗೆ ಕಾನೂನಿನ ಎ,ಬಿ,ಸಿ,ಡಿ ಗೊತ್ತಿರುವಂತೆ ಕಾಣುತ್ತಿಲ್ಲ, ಹಾಗಾಗಿ ಅದು ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಕೈ ತೊಳೆದುಕೊಳ್ಳುತ್ತಿದ್ದಾರೆ'' ಎಂದು ತರಾಟೆಗೆ ತೆಗೆದುಕೊಂಡಿತು.

ಅಲ್ಲದೆ, ಕೋರ್ಟ್ ಈ ಹಿಂದಿನ ಆದೇಶದ ವೇಳೆ ನೀಡಿದ್ದ ನಿರ್ದೇಶನಗಳನ್ನು ಮಂಡಳಿ ಅಧಿಕಾರಿಗಳು ಪಾಲಿಸಿ, ಆ ಸಂಬಂಧ ಒಂದು ವಾರದೊಳಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿತು.

ವಿಜಯ ಕರ್ನಾಟಕ

| Date | 01-12-2020 |
|---|---|
| Page No | 5 |


# ಶೌಚಾಲಯ ಕೊರತೆ: ಕ್ರಿಯಾ ಯೋಜನೆ ಸಲ್ಲಿಸಲು ನಿರ್ದೇಶನ

**ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ, ಅಸಮರ್ಪಕ ನಿರ್ವಹಣೆ ಕುರಿತು ಸಮಗ್ರ ಸಮೀಕ್ಷೆ ನಡೆಸಿ ಕ್ರಿಯಾ ಯೋಜನೆ ಸಲ್ಲಿಸುವಂತೆ ಹೈಕೋರ್ಟ್ ಸೋಮವಾರ ಬಿಬಿಎಂಪಿಗೆ ನಿರ್ದೇಶನ ನೀಡಿತು.

ಬೆಂಗಳೂರಿನ ಲೆಟ್ಸ್ ಕಿಡ್ಸ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಿಜೆ ಎ.ಎಸ್. ಓಕ್ ನೇತೃತ್ವದ ವಿಭಾಗೀಯಪೀಠದ ಮುಂದೆ ವಿಚಾರಣೆಗೆ ಬಂದಿತು.

ಮೊದಲು ಬಿಬಿಎಂಪಿ ಬೆಂಗಳೂರಿನಲ್ಲಿ ಎಷ್ಟು ಜನಸಂಖ್ಯೆ ಇದೆ, ಎಷ್ಟು ಸಾರ್ವಜನಿಕ ಶೌಚಾಲಯಗಳಿವೆ, ಅವುಗಳ ನಿರ್ವಹಣೆ ಹೇಗೆ ಎಂಬ ಬಗ್ಗೆ ಸಮಗ್ರವಾಗಿ ಸಮೀಕ್ಷೆ ನಡೆಸಬೇಕು. ಅಲ್ಲದೆ, ಎಷ್ಟು ಶೌಚಾಲಯಗಳ ಅಗತ್ಯವಿದೆ, ಅವುಗಳ ನಿರ್ಮಾಣದ ಯೋಜನೆ ಮತ್ತಿತರ ಅಂಶಗಳನ್ನು ಒಳಗೊಂಡಂತೆ ಸಮಗ್ರ ಕ್ರಿಯಾ ಯೋಜನೆ ರೂಪಿಸಿ 2021ರ ಜ.9ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಪೀಠ ಹೇಳಿತು.

**2021 ಜನವರಿ 9ರ ಗಡುವು ನೀಡಿದ ಹೈಕೋರ್ಟ್**

»06

VK ವಿಜಯ ಕರ್ನಾಟಕ

| Date | 01-12-2020 |
| --- | --- |
| Page No | 6 |

### ಪರೀಕ್ಷೆ ಪ್ರಮಾಣ ಇಳಿಕೆ | ಹೊಸದಾಗಿ 4682 ಮಂದಿಗೆ ಸೋಂಕು

# ಏಡ್ಸ್ ನಿಯಂತ್ರಣಕ್ಕೆ ಕೋವಿಡ್ ಪ್ರಹಾರ

**ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಭೀತಿಯಿಂದ ಪರೀಕ್ಷೆ ಮಾಡಿಸಿಕೊಳ್ಳಲು ಬರುವವರ ಸಂಖ್ಯೆ ಕಡಿಮೆಯಾಗಿರುವ ಕಾರಣ ಪ್ರಸಕ್ತ ಸಾಲಿನಲ್ಲಿ ಎಚ್‌ಐವಿ ಪರೀಕ್ಷೆ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಪಾಸಿಟಿವಿಟಿ ಪ್ರಮಾಣ ಏರಿಕೆಯಾಗಿದೆ.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಏಪ್ರಿಲ್‌ನಿಂದ ಅಕ್ಟೋಬರ್ ನಡುವೆ 6,96,159 ಟೆಸ್ಟ್‌ಗಳನ್ನು ಮಾಡಲಾಗಿದ್ದು, ಎಎನ್‌ಸಿ(ಗರ್ಭಿಣಿಯರ ಪರೀಕ್ಷೆ) ವೇಳೆ ಕಂಡು ಬಂದ 313 ಪಾಸಿಟಿವ್ ಪ್ರಕರಣಗಳೂ ಸೇರಿ ಒಟ್ಟು 4,995 ಮಂದಿ ಎಚ್‌ಐವಿ ಸೋಂಕಿತರು ಪತ್ತೆಯಾಗಿದ್ದಾರೆ. ರಾಜ್ಯದಲ್ಲಿ ಒಟ್ಟು 1.69 ಲಕ್ಷ ಮಂದಿ ಎಚ್‌ಐವಿ ಸೋಂಕಿತರಿದ್ದಾರೆ.

ರಾಜ್ಯದಲ್ಲಿ ಈ ಬಾರಿ ಕೋವಿಡ್ ಕಾರಣ ಎಚ್‌ಐವಿ ಟೆಸ್ಟಿಂಗ್ ಕಡಿಮೆಯಾಗಿದೆ. ಸಾಕಷ್ಟು ಸಿಬ್ಬಂದಿ ಕೋವಿಡ್ ಕರ್ತವ್ಯದಲ್ಲಿದ್ದರು. ಆಸ್ಪತ್ರೆಗಳಲ್ಲಿ ಒಪಿಡಿಗಳು ಬಂದ್ ಆದ ಕಾರಣ ಹೆಚ್ಚಿನ ಜನ ಪರೀಕ್ಷೆಗೆ ಬಂದಿಲ್ಲ. ತೀವ್ರ ಪ್ರಮಾಣದ ಲಕ್ಷಣಗಳು ಇದ್ದವರೇ ಹೆಚ್ಚಾಗಿ ಟೆಸ್ಟಿಂಗ್ ಬಂದ ಕಾರಣ ಪಾಸಿಟಿವಿಟಿ ಪ್ರಮಾಣ ಹೆಚ್ಚಾಗಿದೆ. ಕಳೆದ ವರ್ಷ ಶೇ.0.60ರಷ್ಟು ಇದ್ದ ಪಾಸಿಟಿವಿಟಿ ಪ್ರಮಾಣ ಈ ವರ್ಷ 0.67ಗೆ ಏರಿಕೆಯಾಗಿದೆ. 26.34 ಲಕ್ಷ ಟೆಸ್ಟಿಂಗ್ ಗುರಿ ಇತ್ತು. ಈವರೆಗೆ 6.96 ಲಕ್ಷ ಟೆಸ್ಟ್ ಆಗಿವೆ. ಶೇ.26.42ರಷ್ಟು ಗುರಿ ಸಾಧಿಸಲಾಗಿದೆ. ಮಾರ್ಚ್‌ವರೆಗೆ ಕಾಲಾವಕಾಶ ಇರುವ ಕಾರಣ ಈ ಪ್ರಮಾಣ ಶೇ.67ರಿಂದ ಶೇ.70ರಷ್ಟಾಗಬಹುದು ಎಂದು ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ (ಕೆಎಸ್‌ಎಪಿಎಸ್) ಅಧಿಕಾರಿ ಗೋವಿಂದರಾಜು ತಿಳಿಸಿದರು.




### ಥೆರಪಿ ಕೇಂದ್ರಗಳಲ್ಲಿ 3,51,182 ಮಂದಿ ನೋಂದಣಿ

ಸೋಂಕಿತರ ಜೀವಿತಾವಧಿಯನ್ನು ವೃದ್ಧಿಸುವ ಆ್ಯಂಟಿ ರೆಟ್ರೋವೈರಲ್ ಔಷಧಿ ವಿತರಿಸುವ 68 ಆ್ಯಂಟಿ ರೆಟ್ರೋವೈರಲ್ ಥೆರಪಿ ಕೇಂದ್ರಗಳು ರಾಜ್ಯದಲ್ಲಿವೆ. 311 ಲಿಂಕ್ ಆ್ಯಂಟಿ ರೆಟ್ರೋವೈರಲ್ ಥೆರಪಿ ಕೇಂದ್ರಗಳಿವೆ. 2004ರಲ್ಲಿ ಎಚ್‌ಐವಿ ನಿಯಂತ್ರಣ ಯೋಜನೆ ರಾಜ್ಯದಲ್ಲಿ ಆರಂಭವಾದ ಬಳಿಕ 3,51,182 ಮಂದಿ ಎಚ್‌ಐವಿ ಸೋಂಕಿತರು ಥೆರಪಿ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 1,67,872 ಮಂದಿ ಔಷಧಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

### ರಾಜ್ಯದಲ್ಲಿ ಒಟ್ಟು 1.69 ಲಕ್ಷ ಮಂದಿ ಸೋಂಕಿತರು

ಒಟ್ಟಾರೆ ಪತ್ತೆಯಾಗುವ ಎಚ್‌ಐವಿ ಸೋಂಕಿನ ಪ್ರಕರಣಗಳ ಪೈಕಿ ಬೆಂಗಳೂರು, ವಿಜಯಪುರ, ಬಾಗಲಕೋಟೆ, ಕೊಪ್ಪಳ ಮತ್ತು ಬಳ್ಳಾರಿಯಲ್ಲಿ ಹೆಚ್ಚು ಸೋಂಕು ಪ್ರಕರಣಗಳು ವರದಿಯಾಗುತ್ತವೆ.

ಲೈಂಗಿಕ ಕಾರ್ಯಕರ್ತೆಯರು, ಲೈಂಗಿಕ ಅಲ್ಪಸಂಖ್ಯಾತರು, ಲಿಂಗ ಪರಿವರ್ತಿತರು, ವಲಸಿಗರು ಮತ್ತು ಚಾಲಕ- ಕ್ಲೀನರ್‌ಗಳಲ್ಲಿ ಎಚ್‌ಐವಿ ಸೋಂಕಿನ ಪ್ರಮಾಣ ಹೆಚ್ಚಾಗಿದೆ. ಸೋಂಕಿಗೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿರುವ ಈ ವರ್ಗದವರಲ್ಲಿ ಜಾಗೃತಿ ಮೂಡಿಸಿ ಸೋಂಕು ನಿಯಂತ್ರಿಸಲು ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ.

### 9ನೇ ಸ್ಥಾನದಲ್ಲಿ ಕರ್ನಾಟಕ

ದೇಶದಲ್ಲಿ ಎಚ್‌ಐವಿ ಸೋಂಕಿತರು ಹೆಚ್ಚಾಗಿರುವ ರಾಜ್ಯಗಳ ಪೈಕಿ ಕರ್ನಾಟಕ ದೇಶದಲ್ಲೇ 9ನೇ ಸ್ಥಾನದಲ್ಲಿದೆ. ದಕ್ಷಿಣ ಭಾರತದಲ್ಲಿ ಸೋಂಕು ಹೆಚ್ಚಾಗಿರುವ ನಾಲ್ಕು ರಾಜ್ಯಗಳಲ್ಲಿ ಕರ್ನಾಟಕ ಕೂಡ ಒಂದಾಗಿದೆ. ಎಚ್‌ಐವಿ ನಿಯಂತ್ರಣ ಯೋಜನೆಗಳ ಪರಿಣಾಮಕಾರಿ ಜಾರಿ ಕಾರಣ ಸೋಂಕು ಹರಡುವಿಕೆ ಕಡಿಮೆಯಾಗಿದೆ. ಪ್ರಸಕ್ತ ಸಾಲಿನಲ್ಲಿ 14.50 ಲಕ್ಷ ಗರ್ಭಿಣಿಯರಿಗೆ ಟೆಸ್ಟಿಂಗ್ ಮಾಡಲಾಗಿದ್ದು, ಸೋಂಕಿನ ಪ್ರಮಾಣ ಅತಿ ಕಡಿಮೆ ಅಂದರೆ ಶೇ 0.04ರಷ್ಟಿದೆ. ಅದೇ ರೀತಿ ಸಾಮಾನ್ಯ ಜನ, ವಯಸ್ಕರಲ್ಲಿ ಸೋಂಕಿನ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

| Date | 01-12-2020 |
|---|---|
| Page No | 6 |

# ಕ್ರಿಯಾ ಯೋಜನೆ ಸಲ್ಲಿಕೆಗೆ ನಿರ್ದೇಶನ

» ನಮ್ಮ ಮೊದಲ ಪುಟದಿಂದ

ಬಿಬಿಎಂಪಿ ಯೋಜನೆ ಆಧರಿಸಿ ನ್ಯಾಯಾಲಯ ಮುಂದಿನ ಆದೇಶಗಳನ್ನು ನೀಡಲಿದೆ ಎಂದ ನ್ಯಾಯಪೀಠ, ವಿಚಾರಣೆಯನ್ನು ಜ.10ಕ್ಕೆ ಮುಂದೂಡಿತು.

ಮೊದಲು ಬಿಬಿಎಂಪಿ ಸಮಗ್ರ ಯೋಜನೆ ರೂಪಿಸಲಿ, ಅದನ್ನು ಆಧರಿಸಿ ನಗರದ ಇತರೆ ಸ್ಥಳೀಯ ಸಂಸ್ಥೆಗಳಲ್ಲೂ ಅದೇ ಯೋಜನೆಯನ್ನು ಅನುಸರಿಸುವ ಬಗ್ಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದು ನ್ಯಾಯಪೀಠ ಹೇಳಿತು. ಕಳೆದ ವಿಚಾರಣೆ ವೇಳೆಯೇ ನ್ಯಾಯಾಲಯ, ನಗರದಲ್ಲಿ ಎಷ್ಟು ಸಾರ್ವಜನಿಕ ಶೌಚಾಲಯಗಳಿವೆ, ಮಹಿಳೆಯರಿಗೆ ಎಷ್ಟು ಶೌಚಾಲಯಗಳಿವೆ, ಅವುಗಳ ಸ್ಥಿತಿಗತಿಯ ವಿವರವನ್ನು ಕೇಳಿತ್ತು. ಕೆಎಂಸಿ ಕಾಯಿದೆ ಸೆಕ್ಷನ್ 248 ಮತ್ತು 249ರ ಅನ್ವಯ 20ಕ್ಕೂ ಅಧಿಕ ಕಾರ್ಮಿಕರು, ಕೂಲಿಕಾರರು ಇರುವ ಜಾಗಗಳು, ಸಿನಿಮಾ ಮಂದಿರ, ರೈಲು, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳನ್ನೂ ಒದಗಿಸಬೇಕಾದದ್ದು ಬಿಬಿಎಂಪಿ ಆಯುಕ್ತರ ಕರ್ತವ್ಯವಾಗಿದೆ ಎಂದು ಆದೇಶಿಸಿತ್ತು.

ಅರ್ಜಿದಾರರ ಪರ ವಕೀಲರು, ''ಸ್ವಚ್ಛ ಭಾರತ್ ಮಿಷನ್ ಮಾರ್ಗಸೂಚಿಯಡಿಯಲ್ಲಿ ಪ್ರತಿ 100 ಪುರುಷರು ವಾಸಿಸುವೆಡೆ ಒಂದು ಶೌಚಾಲಯ ಇರಬೇಕು. 100ರಿಂದ 200 ಮಹಿಳೆಯರಿದ್ದರೆ ಎರಡು ಶೌಚಾಲಯ ಇರಬೇಕು ಎಂದು ಹೇಳಲಾಗಿದೆ. ಆದರೆ, ನಗರದಲ್ಲಿ 473 ಸಾರ್ವಜನಿಕ ಶೌಚಾಲಯ ಸಂಕೀರ್ಣಗಳಲ್ಲಿ 2838 ಶೌಚಾಲಯಗಳಿವೆ, ಸ್ವಚ್ಛ ಭಾರತ್ ಮಿಷನ್ ನಿಯಮದಂತೆ ಶೇ.50ರಷ್ಟು ಶೌಚಾಲಯಗಳು ಲಭ್ಯವಿಲ್ಲ'' ಎಂದರು.

ವಲಸೆ ಕಾರ್ಮಿಕರು, ಕೂಲಿಕಾರರು ಮತ್ತು ಇತರೆ ಜನರಿಗೆ ವಿಶೇಷವಾಗಿ ಮಹಿಳೆಯರಿಗೆ ಅಗತ್ಯ ಶೌಚಾಲಯಗಳಿಲ್ಲ. ಜತೆಗೆ ಪುರುಷರು ಮತ್ತು ಬಡವರು ಶೌಚಾಲಯಗಳನ್ನು ಬಳಕೆ ಮಾಡಲು ಹಣ ನೀಡಬೇಕಾಗಿದೆ. ಹಾಗಾಗಿ, ಹೆಚ್ಚಿನ ಜನ ಬಯಲಿನಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

| Date | 01-12-2020 |
| --- | --- |
| Page No | 6 |

# ಸಮೀಕ್ಷೆಗೆ ನೆರವು ಪಡೆಯಲು ಸೂಚನೆ

**ಬೆಂಗಳೂರು:** ನಗರದ ಪ್ರಮುಖ ರಸ್ತೆ ಹಾಗೂ ಸಿಗ್ನಲ್‌ಗಳಲ್ಲಿ ಆಟಿಕೆಗಳು, ಹೂ ಮತ್ತಿತರೆ ವಸ್ತುಗಳನ್ನು ಮಾರಾಟ ಮಾಡಲು ಚಿಕ್ಕ ಮಕ್ಕಳನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ಸಮೀಕ್ಷೆ ನಡೆಸಲು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವನ್ನು ಬಳಸಿಕೊಳ್ಳುವಂತೆ ಹೈಕೋರ್ಟ್, ಸರಕಾರ ಮತ್ತು ಬಿಬಿಎಂಪಿಗೆ ಸೂಚನೆ ನೀಡಿತು.

ಲೆಟ್ಜ್ ಕಿಡ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಆಗ ಹಿಂದಿನ ಆದೇಶದಂತೆ ಸಮೀಕ್ಷೆ ನಡೆಸಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಪ್ರಶ್ನಿಸಿತು. ಅದಕ್ಕೆ ಸರಕಾರ, ಬಿಬಿಎಂಪಿ ಕಾಲಾವಕಾಶ ಕೋರಿತು.

ವಿಜಯ ಕರ್ನಾಟಕ

| Date | 01-12-2020 |
| --- | --- |
| Page No | 6 |

# ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್ ಮೂರನೇ ಹಂತದ ಟ್ರಯಲ್

**ಬೆಂಗಳೂರು:** ನಗರದ ವೈದೇಹಿ ವೈದ್ಯಕೀಯ ವಿಜ್ಞಾನಗಳು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವಿಡ್-19 ಲಸಿಕೆ ಕೋ-ವ್ಯಾಕ್ಸಿನ್‌ನ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಯಲಿದೆ.

ಕ್ಲೀನ್‌ಟ್ರಾಕ್ ಇಂಟರ್‌ನ್ಯಾಷನಲ್ ಪ್ರೈ.ಲಿ, ವೈದೇಹಿ ಆಸ್ಪತ್ರೆಯ ತಂಡವು ಡಿ.2ರಂದು ಕ್ಲಿನಿಕಲ್ ಟ್ರಯಲ್ ಆರಂಭಿಸಲಿವೆ. 1000 ಸ್ವಯಂಸೇವಕರು ಹೆಸರು ನೋಂದಣಿ ಮಾಡಿಕೊಳ್ಳುವ ನಿರೀಕ್ಷೆ ಇದೆ. ಟ್ರಯಲ್‌ನಲ್ಲಿ ಬರುವ ಡೇಟಾವನ್ನು ಕ್ಲೀನ್ ಟ್ರಾಕ್ ಕಂಪನಿ ವಿಶ್ಲೇಷಣೆ ಮಾಡಲಿದೆ. ನಂತರ ಅದನ್ನು ಡಿಸಿಜಿಐಗೆ ಸಲ್ಲಿಕೆ ಮಾಡಲಾಗುತ್ತದೆ ಎಂದು ವೈದೇಹಿ ಆಸ್ಪತ್ರೆ ನಿರ್ದೇಶಕ ಕೆ.ಎಂ. ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 01-12-2020 |
| --- | --- |
| Page No | 3 |



ಪಶ್ಚಿಮ ವಲಯ ಜಂಟಿ ಆಯುಕ್ತರ ವರ್ಗಾವಣೆ ಮಾಡಲು ಆದೇಶವಿದೆ. ಆದರೆ, ಜಂಟಿ ಆಯುಕ್ತ ಹುದ್ದೆಯ ಜವಾಬ್ದಾರಿ ನಿರ್ವಹಣೆಗೆ ಬೇರೆ ಅಧಿಕಾರಿ ಇಲ್ಲದಂತಾಗಿದೆ. ಹೀಗಾಗಿ, ಜಂಟಿ ಆಯುಕ್ತ ಹುದ್ದೆಗೆ ಮತ್ತೊಬ್ಬ ಅಧಿಕಾರಿ ನಿಯೋಜಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುತ್ತಿದೆ. ಬದಲಿ ಅಧಿಕಾರಿ ಬಂದ ತಕ್ಷಣ ಅವರನ್ನು ಮಾತೃ ಇಲಾಖೆಗೆ ಕಳಿಸಲಾಗುವುದು.

| ಮಂಜುನಾಥ ಪ್ರಸಾದ್ ಬಿಬಿಎಂಪಿ ಆಯುಕ್ತ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 01-12-2020 |
|---|---|
| Page No | 3 |

# ವರ್ಗಾವಣೆಯಾಗಿ 6 ತಿಂಗಳಾದರೂ ಕುರ್ಚಿ ಬಿಡದ ಜಂಟಿ ಆಯುಕ್ತ

**ಬೆಂಗಳೂರು:** ಬಿಬಿಎಂಪಿ ಪಶ್ಚಿಮ ವಲಯ ಜಂಟಿ ಆಯುಕ್ತ ಎನ್. ಚಿದಾನಂದ ಅವರನ್ನು ಸರ್ಕಾರ ಜೂ.8ರಂದು ಕೃಷಿ ಇಲಾಖೆಗೆ ವರ್ಗಾವಣೆ ಮಾಡಿ ಆದೇಶಿಸಿದೆ. 6 ತಿಂಗಳಲ್ಲಿ ಎರಡು ಬಾರಿ ವರ್ಗಾವಣೆ ಆದೇಶವಾದರೂ ಕೋವಿಡ್ ಮತ್ತು ಇತರೆ ನೆಪವೊಡ್ಡಿ ಪಾಲಿಕೆಯಲ್ಲಿಯೇ ಠಿಕಾಣಿ ಹೂಡಿದ್ದಾರೆ.

» **ಚಿದಾನಂದ ವರ್ಗಾವಣೆಗೆ ಜೂ.8ರಂದೇ ಸರ್ಕಾರ ಆದೇಶ**

ಸರ್ಕಾರದ ವಿವಿಧ ಇಲಾಖೆಗಳಿಂದ ಪಾಲಿಕೆ ಸೇವೆಗೆ ಬರುವ ಅಧಿಕಾರಿಗಳು, ಸರ್ಕಾರ ವರ್ಗಾವಣೆ ಆದೇಶ ನೀಡಿದರೂ ಕುರ್ಚಿ ಬಿಟ್ಟು ಹೋಗುವುದಿಲ್ಲ. ಇಂತಹ ಹಲವು ಪ್ರಕರಣಗಳು ನಡೆದಿವೆ.

6 ತಿಂಗಳ ಹಿಂದೆಯೇ ವರ್ಗವಾದರೂ ಕುರ್ಚಿಗೆ ಅಂಟಿಕೊಂಡು ಕುಳಿತಿರುವ ಚಿದಾನಂದ ಇದಕ್ಕೆ ಮತ್ತೊಂದು ಸಾಕ್ಷಿಯಾಗಿದ್ದಾರೆ. ಮೂಲತಃ ಕೃಷಿ ಇಲಾಖೆ ಜಂಟಿ ನಿರ್ದೇಶಕರಾಗಿರುವ ಚಿದಾನಂದ, ಯಾವ ಆಧಾರದ ಮೇಲೆ ಕೆಎಎಸ್ ತತ್ಸಮಾನ ಹುದ್ದೆಯಾದ ಜಂಟಿ ಆಯುಕ್ತ ಹುದ್ದೆ ಅಲಂಕರಿಸಿದರು ಎಂಬುದೇ ಪಾಲಿಕೆ ವಲಯದಲ್ಲಿ ಆಶ್ಚರ್ಯಕ್ಕೆ ಕಾರಣವಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 01-12-2020 |
| --- | --- |
| Page No | 4 |

# ಮಾರುಕಟ್ಟೆ ಮುಚ್ಚಿಸಿದರೆ ಕಠಿಣ ಕ್ರಮ

**ಬೆಂಗಳೂರು:** ಮರಾಠ ಅಭಿವೃದ್ಧಿ ಪ್ರಾಧಿಕಾರ ರಚನೆ ವಿರೋಧಿಸಿ ಡಿ.5ರಂದು ರಾಜ್ಯ ಬಂದ್‌ಗೆ ಕರೆ ನೀಡಿದ್ದು, ಈ ವೇಳೆ ಪಾಲಿಕೆ ವ್ಯಾಪ್ತಿಯ ಮಾರುಕಟ್ಟೆಯನ್ನು ಬಲವಂತವಾಗಿ ಮುಚ್ಚಿಸುವಂತಿಲ್ಲ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ. ವ್ಯಾಪಾರಿಗಳನ್ನು ಬಂದ್‌ಗೆ ಬೆಂಬಲಿಸುವಂತೆ ಒತ್ತಾಯಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ನಿರ್ದೇಶನವೂ ಇದೆ ಎಂದು ತಿಳಿಸಿದ್ದಾರೆ. ಜನರು ಮತ್ತು ವ್ಯಾಪಾರಿಗಳಿಗೆ ತೊಂದರೆ ಕೊಟ್ಟಲ್ಲಿ ತಪ್ಪಿತಸ್ಥರ ವಿರುದ್ಧ ಸ್ಥಳೀಯ ಅಧಿಕಾರಿಗಳೇ ಠಾಣೆಯಲ್ಲಿ ದೂರು ದಾಖಲಿಸುತ್ತಾರೆ ಎಂದು ತಿಳಿಸಿದ್ದಾರೆ.

| Date | 01-12-2020 |
|---|---|
| Page No | 4 |

# ಬಿಬಿಎಂಪಿ ಚುನಾವಣೆ ಘೋಷಿಸಿ: ಡಿಕೆಶಿ

**ಬೆಂಗಳೂರು:** ಗ್ರಾಮ ಪಂಚಾಯಿತಿ ಚುನಾವಣೆ ನಡೆಸುವಂತೆ ಕಾಂಗ್ರೆಸ್ ನ್ಯಾಯಾಯಲದ ಮೆಟ್ಟಿಲೇರಿತ್ತು. ಜನರಿಗೆ ಅಧಿಕಾರ ಕೊಡಬೇಕು ಎನ್ನುವುದೇ ಕಾಂಗ್ರೆಸ್‌ನ ಆಶಯವಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಗ್ರಾಪಂ.ಗಳಿಗೆ ಚುನಾವಣೆ ಘೋಷಣೆಯಾದಂತೆ ಬಿಬಿಎಂಪಿಗೂ ಚುನಾವಣೆ ನಡೆಯಬೇಕು ಎಂದರು. ಗ್ರಾಪಂ ಚುನಾವಣೆ ಸಂಬಂಧ ಪಕ್ಷದಲ್ಲಿ ಚರ್ಚೆ ನಡೆಸಲಾಗುತ್ತಿದೆ. ಹಿರಿಯ ನಾಯಕರ ಸಭೆಯಲ್ಲಿ ಬಿಜೆಪಿ ನಿರ್ಧಾರಗಳು, ರಾಜ್ಯದ ಪ್ರಸಕ್ತ ಬೆಳವಣಿಗೆ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಬಳಿಕ ನಿರ್ಧರಿಸಲಾಗುವುದು ಎಂದು ಹೇಳಿದರು.

| Date | 01-12-2020 |
| --- | --- |
| Page No | 2 |



ಉದಯವಾಣಿ
ಜನಮನದ ಜೀವನಾಡಿ

| Date | 01-12-2020 |
|---|---|
| Page No | 2 |

# ತೋಟಗಾರಿಕೆ, ಅರಣ್ಯ ವಿಭಾಗದ ಪ್ರಗತಿ ಪರಿಶೀಲನೆ

## ರಸ್ತೆಗಳ ಮಾರ್ಗದ ವಿಭಜಕ, ಪ್ರಮುಖ ವೃತ್ತಗಳಲ್ಲಿ ಗಿಡಗಳನ್ನು ಸಮರ್ಪಕವಾಗಿ ನಿರ್ವಹಿಸಿ: ಗೌರವ್‌ಗುಪ್ತ

**ಬೆಂಗಳೂರು:** ನಗರದ ಹೊರವರ್ತುಲ ಮತ್ತು ಪ್ರಮುಖ ರಸ್ತೆಗಳ ವಿಭಜಕಗಳಲ್ಲಿರುವ ಎಲ್ಲಾ ಗಿಡಗಳನ್ನು ಪ್ರೂನಿಂಗ್ ಮಾಡುವ ಮೂಲಕ ಸುಂದರಗೊಳಿಸಬೇಕು ಎಂದು ತಾಕೀತು ಮಾಡಿದ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ, ಇದಕ್ಕಾಗಿ ಎರಡು ತಿಂಗಳ ಗಡುವು ನೀಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತೋಟಗಾರಿಕೆ ಹಾಗೂ ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ಬಿಬಿಎಂಪಿ ವ್ಯಾಪ್ತಿಯ ಹೊರವರ್ತುಲ ರಸ್ತೆ ಹಾಗೂ ಪ್ರಮುಖ ರಸ್ತೆಗಳ ಮಾರ್ಗದಲ್ಲಿರುವ ವಿಭಜಕ ಮತ್ತು ಪ್ರಮುಖ ವೃತ್ತಗಳಲ್ಲಿ ಗಿಡಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಎಂದರು.

ನಗರದ ರಸ್ತೆಗಳು ಸುಂದರವಾಗಿ ಕಾಣುವ ನಿಟ್ಟಿನಲ್ಲಿ ಮೀಡಿಯನ್ಸ್‌ಗಳಲ್ಲಿ ಗಿಡ ಬೆಳೆಸಿ ಹಸಿರನ್ನುಹೆಚ್ಚಿಸುವಹಿನ್ನೆಲೆಯಲ್ಲಿತೋಟಗಾರಿಕೆ ಇಲಾಖೆ ಪಾತ್ರ ಬಹುಮುಖ್ಯ. ಆದರೆ



ಬಿಬಿಎಂಪಿ ಕಚೇರಿಯಲ್ಲಿ ಸೋಮವಾರ ಆಡಳಿತಾಧಿಕಾರಿ ಗೌರವ್ ಗುಪ್ತ ತೋಟಗಾರಿಕೆ ಮತ್ತು ಅರಣ್ಯ ವಿಭಾಗದ ಪ್ರಗತಿ ಪರಿಶೀಲನೆ ನಡೆಸಿದರು.

ತೋಟಗಾರಿಕೆ ಇಲಾಖೆಯಿಂದ ಯಾವುದೇ ರಸ್ತೆಗಳ ಮೀಡಿಯನ್ನಲ್ಲಿರುವ ಗಿಡಗಳ ನಿರ್ವಹಣೆ ಸಮರ್ಪಕವಾಗಿ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗಿಡಗಳ ವಾಹನ ಸವಾರರಿಗೆ ಸಮಸ್ಯೆ ಆಗಬಾರದು. ಇದಕ್ಕೆ ಅಗತ್ಯವಿರುವ ಗಿಡಗಳನ್ನು ಟ್ರಿಮ್ ಮಾಡುವುದು, ರೆಂಬೆ ಕತ್ತರಿಸುವುದು ಸೇರಿ ನಿಯಮಿತ ನಿರ್ವಹಣೆ ಮಾಡಬೇಕು. 2 ತಿಂಗಳಲ್ಲಿ ಈ ಕೆಲಸ ಪೂರ್ಣಗೊಳ್ಳಬೇಕು ಎಂದು ಎಲ್ಲಾ ವಲಯದ ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಅಲ್ಲದೆ, ನಗರದಲ್ಲಿ ಇತ್ತೀಚಿಗೆ ಯಾವ ಉದ್ಯಾನಗಳನ್ನು ನಿರ್ವಹಣೆ ಮಾಡಲಾಗಿದೆ ಎಂಬುದರ ಪಟ್ಟಿಕೊಡಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ಉದ್ಯಾನಗಳನ್ನು ಸುಂದರವಾಗಿ ನಿರ್ವಹಣೆ ಮಾಡಬೇಕು, ವಾಯುವಿಹಾರಕ್ಕೆ ಬರುವವರಿಗೆ ವ್ಯವಸ್ಥೆ ಅನುಕೂಲಕರವಾಗಿರಬೇಕು ಮತ್ತು ತಮ್ಮ ಜವಾಬ್ದಾರಿ ಅರಿತು ಸರಿಯಾಗಿ ಕೆಲಸ ಮಾಡಿ ಎಂದು ಹೇಳಿದರು.

ಅದೇ ರೀತಿ, ಪಾಲಿಕೆ ಅರಣ್ಯ ವಿಭಾಗದಿಂದ ಯಾವ್ಯಾವ ಯೋಜನೆ ರೂಪಿಸಲಾಗಿದೆ? ಎಲ್ಲೆಲ್ಲೆ ಸಸಿ ನೆಡಲಾಗುತ್ತಿದೆ? ಎಲ್ಲಿ ಕಿರು ಉದ್ಯಾನ (ಟ್ರೀ ಪಾರ್ಕ್)ಗಳಿವೆ? ರಸ್ತೆ ಮಾರ್ಗಗಳಲ್ಲಿ ಎಲ್ಲೆಲ್ಲಿ ಸಸಿ ನೆಡಲಾಗಿದೆ ಎಂಬ ಮಾಹಿತಿ ಕೊಡಲು ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ವಿಶೇಷ ಆಯುಕ್ತ ಜೆ.ಮಂಜುನಾಥ್, ಉಪ ಅರಣ್ಯ ಸಂರಕ್ಷಣಾಧಿಕಾರಿ ರಂಗನಾಥಸ್ವಾಮಿ, ತೋಟಗಾರಿಕೆ ವಿಭಾಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

ಉದಯವಾಣಿ
ಜನಮನದ ಜೀವನಾಡಿ

| Date | 01-12-2020 |
| --- | --- |
| Page No | 2 |

# ಲಸಿಕೆ ವಿತರಣೆ ಸಿದ್ಧತೆ: ಪ್ರಶಂಸೆ

**ಬೆಂಗಳೂರು:** ಲಸಿಕೆ ವಿತರಣೆಗೆ ಸಂಬಂಧಿಸಿ ರಾಜ್ಯ ಸರ್ಕಾರ ಕೈಗೊಂಡ ಕ್ರಮ ವನ್ನು ಕೇಂದ್ರ ಆರೋಗ್ಯ ಇಲಾಖೆ ಪ್ರಶಂಸಿಸಿದೆ.

ಸೋಮವಾರ ನಡೆದ ವಿವಿಧ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳ ವಿಡಿಯೋ ಸಂವಾದದಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳನ್ನು ಪ್ರಸ್ತುತಪಡಿಸಲಾಗಿದೆ. ಪ್ರಮುಖವಾಗಿ ವಿವಿಧ ಟಾಸ್ಕ್ ಫೋರ್ಸ್, ಚಾಲನಾ ಸಮಿತಿ ರಚಿಸಿ ಹಲವು ಸಭೆ ನಡೆಸಿರುವುದು, ಮೊದಲ ಹಂತದ ಲಸಿಕೆ ವಿತರಣೆಗೆ ಹೆಚ್ಚು ಆರೋಗ್ಯ ಕಾರ್ಯಕರ್ತೆಯರ ನೋಂದಣಿ, ಲಸಿಕೆ ವಿತರಣೆ, ಶೇಖರಣೆಗೆ ಸಿದ್ಧತೆ, ತಾಲೂಕು ಮಟ್ಟದಲ್ಲಿ ಕಾರ್ಯಪಡೆ ಸಭೆಗೆ ಕೈಗೊಂಡಿರುವ ಕ್ರಮಗಳ ಕುರಿತು ವಿವರಿಸಲಾಗಿದೆ. ರಾಜ್ಯದ ಈ ಎಲ್ಲಾ ಕ್ರಮಗಳಿಗೂ ಕೇಂದ್ರ ಸರ್ಕಾರ ಪ್ರಶಂಸಿಸಿದೆ.

**ನಾಲ್ಕೂವರೆ ಲಕ್ಷ ನೋಂದಣಿ:** ರಾಜ್ಯದಲ್ಲಿ ಸರ್ಕಾರಿ ವಲಯದಲ್ಲಿ 2.24 ಲಕ್ಷ, ಖಾಸಗಿ ವಲಯದಲ್ಲಿ 2.45 ಲಕ್ಷ ಆರೋಗ್ಯ ಕಾರ್ಯಕರ್ತೆಯರನ್ನು ಲಸಿಕೆ ನೀಡಲು ನೋಂದಣಿ ಮಾಡಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ನೋಂದಣಿ ನಡೆಯಲಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 01-12-2020 |
|---|---|
| Page No | 2 |

# ಸಾರ್ವಜನಿಕ ಶೌಚಾಲಯ: ಸಮಗ್ರ ಸಮೀಕ್ಷೆ ನಡೆಸಿ

## ನಗರದಲ್ಲಿ ಎಷ್ಟು ಜನಸಂಖ್ಯೆ ಇದೆ | ಎಷ್ಟು ಶೌಚಾಲಯಗಳಿವೆ, ಶುಚಿತ್ವ ಹೇಗೆ ಎಂಬ ಬಗ್ಗೆ ಮಾಹಿತಿ ನೀಡಲು ಆದೇಶ

**ಬೆಂಗಳೂರು:** ರಾಜಧಾನಿ ಬೆಂಗಳೂರು ನಗರದಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ ಹಾಗೂ ಅಸಮರ್ಪಕ ನಿರ್ವಹಣೆ ಕುರಿತು ಸಮಗ್ರ ಸಮೀಕ್ಷೆ ನಡೆಸಿ ಕ್ರಿಯಾ ಯೋಜನೆ ಸಲ್ಲಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಕುರಿತು ಬೆಂಗಳೂರಿನ ಲೆಟ್ ಕಿಡ್ಸ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ, ಸೋಮವಾರ ಈ ನಿರ್ದೇಶನ ನೀಡಿದೆ.

ಕಳೆದ ವಿಚಾರಣೆ ವೇಳೆ, ಬೆಂಗಳೂರು ನಗರದಲ್ಲಿ ಎಷ್ಟು ಸಾರ್ವಜನಿಕ ಶೌಚಾಲಯಗಳಿವೆ. ಮಹಿಳೆಯರಿಗೆ ಎಷ್ಟು ಶೌಚಾಲಯಗಳಿವೆ. ಅವುಗಳ ಸ್ಥಿತಿಗತಿ ವಿವರವನ್ನು ನ್ಯಾಯಪೀಠ ಕೇಳಿತ್ತು.

ಕರ್ನಾಟಕ ಮುನ್ಸಿಪಲ್ ಕಾಯ್ದೆಯ 248 ಮತ್ತು 249ರ ಅನ್ವಯ 20ಕ್ಕೂ ಅಧಿಕ ಕಾರ್ಮಿಕರು, ಕೂಲಿಕಾರರು ಇರುವ ಜಾಗ, ಸಿನಿಮಾ ಮಂದಿರ, ರೈಲು, ಬಸ್ ನಿಲ್ದಾಣ ಸೇರಿ ಸಾರ್ವಜನಿಕ ಸ್ಥಳಗಳಲ್ಲಿನ ಶೌಚಾಲಯಗಳನ್ನೂ ಒದಗಿಸಬೇಕಾಗಿದ್ದು ಬಿಬಿಎಂಪಿ ಕರ್ತವ್ಯ ಎಂದು ಆದೇಶಿಸಿತ್ತು.

ಅರ್ಜಿದಾರರ ಪರ ವಕೀಲರು, ಸ್ವಚ್ಛ ಭಾರತ್ ಮಿಷನ್ ಮಾರ್ಗಸೂಚಿಯಡಿ ಪ್ರತಿ 100 ಪುರುಷರು ವಾಸಿಸುವ ಕಡೆ ಒಂದು ಶೌಚಾಲಯವಿರಬೇಕು, 100ರಿಂದ 200 ಮಹಿಳೆಯರಿದ್ದರೆ 2 ಶೌಚಾಲಯವಿರಬೇಕು ಎಂದು ಹೇಳಲಾಗಿದೆ. ಆದರೆ ಬೆಂಗಳೂರು ನಗರದಲ್ಲಿ 473 ಸಾರ್ವಜನಿಕ ಶೌಚಾಲಯ ಸಂಕೀರ್ಣಗಳಲ್ಲಿ 2,838 ಶೌಚಾಲಯಗಳಿವೆ. ಸ್ವಚ್ಛ ಭಾರತ್ ಮಿಷನ್ ನಿಯಮದಂತೆ ಶೇ.50 ಶೌಚಾಲಯ ಲಭ್ಯವಿಲ್ಲ ಎಂದು ನ್ಯಾಯಪೀಠಕ್ಕೆ ಮಾಹಿತಿ ನೀಡಿದರು.

ವಲಸೆ ಕಾರ್ಮಿಕರು, ಕೂಲಿಕಾರರು ಮತ್ತು ಇತರೆ ಜನರಿಗೆ ವಿಶೇಷವಾಗಿ ಮಹಿಳೆಯರಿಗೆ ಅಗತ್ಯ ಶೌಚಾಲಯ ಇಲ್ಲ, ಜತೆಗೆ ಪುರುಷರು ಮತ್ತು ಬಡವರು ಶೌಚಾಲಯಗಳನ್ನು ಬಳಕೆ ಮಾಡಲು ಹಣ ನೀಡಬೇಕಾಗಿದೆ. ಹೀಗಾಗಿ ಹೆಚ್ಚಿನ ಜನ ಬಯಲಿನಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.



### ಜ.9ರೊಳಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿ

ವಿಚಾರಣೆ ವೇಳೆ, ಬೆಂಗಳೂರಿನಲ್ಲಿ ಎಷ್ಟು ಜನಸಂಖ್ಯೆ ಇದೆ. ಎಷ್ಟು ಸಾರ್ವಜನಿಕ ಶೌಚಾಲಯಗಳಿವೆ. ಅವುಗಳ ನಿರ್ವಹಣೆ ಹೇಗೆ ನಡೆಯುತ್ತಿದೆ. ಶುಚಿತ್ವ ಕಾಪಾಡಲಾಗುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಸಮಗ್ರವಾಗಿ ಸಮೀಕ್ಷೆ ನಡೆಸಬೇಕು. ಎಷ್ಟು ಶೌಚಾಲಯಗಳ ಅಗತ್ಯವಿದೆ. ಅವುಗಳ ನಿರ್ಮಾಣದ ಯೋಜನೆ ಮತ್ತಿತರ ಅಂಶ ಒಳಗೊಂಡಂತೆ ಸಮಗ್ರ ಕ್ರಿಯಾ ಯೋಜನೆ ರೂಪಿಸಿ 2021ರ ಜ.9ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಅದನ್ನು ಆಧರಿಸಿ ಮುಂದಿನ ಆದೇಶ ನೀಡಲಾಗುವುದು ಎಂದು ಹೇಳಿದ ನ್ಯಾಯಪೀಠ, ವಿಚಾರಣೆಯನ್ನು ಜ.10ಕ್ಕೆ ಮುಂದೂಡಿತು.

**• ಕ್ರಿಯಾಯೋಜನೆ ಆಧರಿಸಿ ಮುಂದಿನ ಆದೇಶ ಎಂದ ಹೈಕೋರ್ಟ್**

## ಧ್ವನಿವರ್ಧಕ ಬಳಕೆ: ತರಾಟೆ

**ಬೆಂಗಳೂರು:** ನಮಾಜ್ ವೇಳೆ ಮಸೀದಿಯೊಂದರಲ್ಲಿ ಅತಿಯಾದ ಧ್ವನಿವರ್ಧಕಗಳನ್ನು ಬಳಸುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಸಂಬಂಧ ನ್ಯಾಯಾಲಯದ ಆದೇಶ ಪಾಲನೆ ಮಾಡದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಹೈಕೋರ್ಟ್, ನಿಗದಿತ ಗಡುವಿನೊಳಗೆ ಆದೇಶ ಪಾಲಿಸದಿದ್ದರೆ ನ್ಯಾಯಾಂಗ ನಿಂದನೆಯಡಿ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದೆ.



ನಗರದ ಗೋವಿಂದರಾಜನಗರದ ಮಸೀದಿಯೊಂದರಲ್ಲಿ ಮಿತಿಮೀರಿ ಧ್ವನಿವರ್ಧಕ ಬಳಸುತ್ತಿರುವುದನ್ನು ಆಕ್ಷೇಪಿಸಿ ವಕೀಲೆ ಸುಮಂಗಲ ಎ.ಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಈ ವೇಳೆ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕೋರ್ಟ್ ಹಿಂದೆ ನೀಡಿದ್ದ ಆದೇಶ ಪಾಲನೆ ಮಾಡದಿರುವುದನ್ನು ಗಮನಿಸಿದ ನ್ಯಾಯಪೀಠ, ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಅಲ್ಲದೇ ತಪ್ಪಿತಸ್ಥ ಅಧಿಕಾರಿ ವಿರುದ್ಧ ಮಂಡಳಿ ಈವರೆಗೂ ಕ್ರಮ ಜರುಗಿಸಲು ಮುಂದಾಗಿಲ್ಲ, ಧ್ವನಿವರ್ಧಕಗಳ ಡೆಸಿಬಲ್ ಸಹ ಮಾಪನ ಮಾಡಿಲ್ಲ, ಅಧಿಕಾರಿಗಳಿಗೆ ಕಾನೂನಿನ ಕನಿಷ್ಠ ತಿಳಿವಳಿಕೆ ಇಲ್ಲದಂತಿದೆ ಎಂದು ತರಾಟೆಗೆ ತೆಗೆದುಕೊಂಡಿತು. ಅಲ್ಲದೇ, ಕೋರ್ಟ್ ಈ ಹಿಂದಿನ ಆದೇಶದ ವೇಳೆ ನೀಡಿದ್ದ ನಿರ್ದೇಶನಗಳನ್ನು ಮಂಡಳಿ ಅಧಿಕಾರಿಗಳು ಪಾಲಿಸಿ, ಆ ಸಂಬಂಧ ವಾರದೊಳಗೆ ವರದಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಆದೇಶ ಪಾಲಿಸದ ಮಂಡಳಿ ಅಧ್ಯಕ್ಷರ ವಿರುದ್ಧ ನ್ಯಾಯಾಂಗ ನಿಂದನೆಯಡಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿ ವಿಚಾರಣೆ ಮುಂದೂಡಿತು.

ಸಂಯುಕ್ತ ಕರ್ನಾಟಕ

| Date | 01-12-2020 |
| --- | --- |
| Page No | 9 |



# ಮಾರುಕಟ್ಟೆ ಮುಚ್ಚಿಸಿದರೆ ಜೋಕೆ

**ಸಂ.ಕ.ಸಮಾಚಾರ ಬೆಂಗಳೂರು**

ಕನ್ನಡಪರ ಸಂಘಟನೆಗಳು ಡಿ.5ರಂದು ಕರೆ ನೀಡಲಾಗಿರುವ ಕರ್ನಾಟಕ ಬಂದ್ ವೇಳೆ ಬಲವಂತವಾಗಿ ಮಾರುಕಟ್ಟೆಗಳನ್ನು ಬಂದ್ ಮಾಡಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕನ್ನಡ ಪರ ಸಂಘಟನೆಗಳು ಬಂದ್ ವೇಳೆ ಬಿಬಿಎಂಪಿ ಮಾಲೀಕತ್ವದ ಮಾರುಕಟ್ಟೆಗಳನ್ನು ಮುಚ್ಚಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದಲ್ಲದೆ, ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗುವುದು ಎಂದು ಹೇಳಿದ್ದಾರೆ.

ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ನಿರ್ದೇಶನದ ಪ್ರಕಾರ ಬಂದ್ ಮಾಡುವವರು ಬಲವಂತವಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸುವಂತಿಲ್ಲ. ಹಾಗೆಯೇ ವ್ಯಾಪಾರಿಗಳನ್ನು ಬಂದ್‌ಗೆ ಬೆಂಬಲಿಸಬೇಕೆಂದು ಒತ್ತಾಯಿಸುವಂತಿಲ್ಲ. ಹಾಗೆ ಮಾಡಿದಲ್ಲಿ ಅದು ಕಾನೂನು ಉಲ್ಲಂಘನೆಯಾಗಲಿದೆ. ಒತ್ತಾಯ ಪೂರ್ವಕವಾಗಿ ಮಾರುಕಟ್ಟೆಗಳನ್ನು ಬಂದ್ ಮಾಡಿಸಿ, ಜನರಿಗೆ ವ್ಯಾಪಾರಿಗಳಿಗೆ ತೊಂದರೆ ನೀಡಬಾರದು. ಒಂದು ವೇಳೆ ತೊಂದರೆ ನೀಡಿದಲ್ಲಿ ತಪ್ಪಿತಸ್ಥರ ವಿರುದ್ಧ ಸ್ಥಳೀಯ ಅಧಿಕಾರಿಗಳೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುತ್ತಾರೆ ಎಂದರು.

> “ಬಿಬಿಎಂಪಿ ಮಾಲೀಕತ್ವದಲ್ಲಿರುವ ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ ಮಾರುಕಟ್ಟೆ, ಮಡಿವಾಳ ಸೇರಿದಂತೆ ಪ್ರಮುಖ ಬಿಬಿಎಂಪಿ ಮಾರುಕಟ್ಟೆಗಳು ಎಂದಿನಂತೆ ವ್ಯಾಪಾರ ವಹಿವಾಟನ್ನು ಡಿ.5ರಂದು ನಡೆಸಲಿವೆ.
>
> **ಮಂಜುನಾಥ್ ಪ್ರಸಾದ್**
>
> | ಪಾಲಿಕೆ ಆಯುಕ್ತ

ಹೊಸ ದಿಗಂತ

| Date | 01-12-2020 |
|---|---|
| Page No | 14 |

ಹೊಸ ದಿಗಂತ 14
01 Dec 2020

## ಅಧಿಕಾರಿಗಳಿಂದ ಮಾಹಿತಿ ಕಲೆಹಾಕಿದ ಗೌರವ್ ಗುಪ್ತ

# ಗಿಡಗಳ ನಿರ್ವಹಣೆಯಲ್ಲಿ ತೋಟಗಾರಿಕೆ ಇಲಾಖೆ ವಿಫಲ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕಾ ಹಾಗೂ ಅರಣ್ಯ ವಿಭಾಗದ ಅಧಿಕಾರಿಗಳ ಜೊತೆ ಆಡಳಿತಾಧಿಕಾರಿ ಗೌರವ್ ಗುಪ್ತ ಪರಿಶೀಲನಾ ಸಭೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಂದ ವಿಭಾಗವಾರು ಮಾಹಿತಿ ಕಲೆಹಾಕಿದರು.

ನಗರದ ರಸ್ತೆಗಳು ಸುಂದರವಾಗಿ ಕಾಣುವಲ್ಲಿ ರಸ್ತೆ ವಿಭಜಕಗಳಲ್ಲಿ ಗಿಡಗಳನ್ನ ಬೆಳೆಸುವುದು ಅತೀಮುಖ್ಯವಾಗಿದೆ. ಆದರೆ ಇದರ ನಿರ್ವಹಣೆಯನ್ನು ತೋಟಗಾರಿಕಾ ಇಲಾಖೆ ಸಮರ್ಪಕವಾಗಿ ಮಾಡುತ್ತಿಲ್ಲ. ಹೀಗಾಗಿ ಮುಂದಿನ 2 ತಿಂಗಳ ಒಳಗಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊರವರ್ತುಲ ರಸ್ತೆ ಹಾಗೂ ಪ್ರಮುಖ ರಸ್ತೆಗಳ ಮಾರ್ಗದಲ್ಲಿರುವ ರಸ್ತೆ ವಿಭಜಕ ಮತ್ತು ಪ್ರಮುಖ ವೃತ್ತಗಳಲ್ಲಿ ಗಿಡಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಮೂಲಕ ಪ್ರದೇಶಗಳ ಸೌಂದರ್ಯವನ್ನು ಹೆಚ್ಚಿಸಬೇಕು ಎಂದು ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಿದರು.ಇತ್ತೀಚಿಗೆ ನಿರ್ವಹಣೆ ಮಾಡಿರುವ ಉದ್ಯಾನವನಗಳ ಬಗ್ಗೆ ಮಾಹಿತಿ ಪಡೆದ ಆಡಳಿತಾಗರರು, ಉದ್ಯಾನವನಗಳ ಸೌಂದರ್ಯ ಹೆಚ್ಚಿಸಲು ಎಲ್ಲಾ ಕ್ರಮ ಕೈಗೊಳ್ಳಬೇಕು. ಆ ಮೂಲಕ ವಾಯುವಿಹಾರಕ್ಕೆಂದು ಬರುವವರಿಗೆ ಅನುಕೂಲವಾಗುವಂತೆ ಉದ್ಯಾನವನವನ್ನು ನಿರ್ವಹಣೆ ಮಾಡಬೇಕು ಎಂದರು.



### ಅರಣ್ಯ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ

ನಗರದ ಸೌಂದರ್ಯ ಹೆಚ್ಚಿಸಲು ಯಾವ ಪ್ರದೇಶಗಳಲ್ಲಿ ಸಸಿಗಳನ್ನು ನೆಡಲಾಗಿದೆ ಮತ್ತು ವಿಭಾಗದಿಂದ ಯಾವೆಲ್ಲ ಯೋಜನೆಗಳನ್ನು ರೂಪಿಸಲಾಗಿದೆ ಎಂಬುದರ ಬಗ್ಗೆ ಆಡಳಿತಾಧಿಕಾರಿ ಗೌರವ್ ಗುಪ್ತ ಅವರು ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಮಾಹಿತಿ ಕಲೆಹಾಕಿದರು. ಈ ವೇಳೆ ವಿಶೇಷ ಆಯುಕ್ತ ಜೆ.ಮಂಜುನಾಥ್, ಉಪ ಅರಣ್ಯ ಸಂರಕ್ಷಣಾಧಿಕಾರಿ ರಂಗನಾಥ ಸ್ವಾಮಿ, ತೋಟಗಾರಿಕೆ ವಿಭಾಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

# 502 ಕೆಜಿ ರಕ್ತಚಂದನ ವಶ: ಮೂವರು ಕಳ್ಳರ ಸೆರೆ

**ಬೆಂಗಳೂರು:** ರಕ್ತ ಚಂದನ ಮರದ ದಿಮ್ಮಿಗಳನ್ನು ಅಕ್ರಮವಾಗಿ ನಗರಕ್ಕೆ ಸಾಗಾಣೆ ಮಾಡುತ್ತಿದ್ದ ಮೂವರ ಆರೋಪಿಗಳ ಸಹಿತ 502 ಕೆ.ಜಿ ರಕ್ತಚಂದನ ಮರದ ದಿಮ್ಮಿಗಳು, ಚಾಕು, ಕೃತ್ಯಕ್ಕೆ ಬಳಸಿದ ವಾಹನವನ್ನು ಆರ್.ಟಿ.ನಗರ ಠಾಣಾ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಕಾವೇರಿನಗರದ ಸುಹೇಲ್ ಖಾನ್(22), ಎಚ್‌ಎಂಟಿ ಲೇಔಟ್‌ನ ಅಬ್ದುಲ್ ಬಶೀರ್(67) ಹಾಗೂ ಅನೀಸಾ ಫಾತಿಮಾ(57) ಬಂಧಿತ ಆರೋಪಿಗಳು ಎಚ್‌ಎಂಟಿ ಲೇಔಟ್‌ನ 6ನೇ ಸಿ ಮುಖ್ಯರಸ್ತೆಯಲ್ಲಿ



ಸಾಗಾಣಿಕೆ ಮಾಡುತ್ತಿದ್ದಾಗ ಆರ್.ಟಿ.ನಗರ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಮೂವರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೂ ತನಿಖೆ ಕೈಗೊಳ್ಳಲಾಗಿದೆ. ಬಂಧಿತರ ಪೈಕಿ ಸಹೇಲ್ ಖಾನ್ 2017ರಲ್ಲಿ ಠಾಣಾ ವ್ಯಾಪ್ತಿಯಲ್ಲಿ ನೂರ್ ಎಂಬ ವ್ಯಕ್ತಿಯನ್ನು ಅಪಹರಿಸಿ ಗೌರಿಬಿದನೂರಿನ ಫಾರ್ಮ್‌ಹೌಸ್‌ನಲ್ಲಿ ಕೊಲೆ ಮಾಡಿರುವ ಅಂಶ ತನಿಖೆ ವೇಳೆ ತಿಳಿದು ಬಂದಿದೆ.

| Date | 01-12-2020 |
| --- | --- |
| Page No | |

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 30-11-2020 |
| --- | --- |
| Page No | 1 |

# ಬಿಬಿಎಂಪಿ ಎಲೆಕ್ಷನ್‌ಗೆ ಹೈಕೋರ್ಟ್ ಗ್ರೀನ್ ಸಿಗ್ನಲ್ ಕೊಟ್ರೆ ಸುಪ್ರಿಂಗೆ ಮೊರೆ..!

ಬೆಂಗಳೂರು: ಚುನಾಯಿತ ವ್ಯವಸ್ಥೆಯಿಲ್ಲದೆ ಬಿಬಿಎಂಪಿ ಆಡಳಿತ ಸೊರಗಿ ಹೋಗಿದೆ. ಚುನಾವಣೆ ಆದಷ್ಟು ಬೇಗ ಆಗಬೇಕೆಂಬ ನಿಟ್ಟಿನಲ್ಲಿ ಕೆಲ ಮಾಜಿ ಕಾರ್ಪೊರೇಟರ್ಸ್ ಕೋರ್ಟ್‌ನ ಮೊರೆ ಹೋಗಿದ್ದೂ ಆಗಿದೆ. ಕೋರ್ಟ್ ಸಹ ವಿಚಾರಣೆ ನಡೆಸಿ ತೀರ್ಪನ್ನು ಕಾಯ್ದಿರಿಸಿದೆ. ಸಾರ್ವಜನಿಕ ಹಿತಾಸಕ್ತಿಗೆ ಸದಾ ಮನ್ನಣೆ ನೀಡುವ ಮುಖ್ಯ ನ್ಯಾಯಮೂರ್ತಿ ಓಕಾ ನೇತೃತ್ವದ ವಿಭಾಗೀಯ ಪೀಠ ಬಹುತೇಕ ಚುನಾವಣೆಗೆ ದಿನಾಂಕ ಫಿಕ್ಸ್



ಮಾಡಬೇಕೆಂಬ ನಿಲುವನ್ನೇ ಪ್ರದರ್ಶಿಸುವ ಸಾಧ್ಯತೆಗಳಿವೆ ಎಂಬ ಮಾತು ಕೂಡಾ ಕೇಳಿಬರುತ್ತಿದೆ.

ಒಂದು ವೇಳೆ ಚುನಾವಣೆಗೆ ಗ್ರೀನ್ ಸಿಗ್ನಲ್ ನೀಡಿದ್ದೇ ಆದರೆ ಸರ್ಕಾರ ಅದನ್ನು ಪ್ರಶ್ನಿಸುವ ನಿರ್ಧಾರಕ್ಕೆ ಬಂದಿದೆ ಎನ್ನುವ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಚುನಾವಣೆಯನ್ನು ಶತಾಯಗತಾಯ ಇನ್ನೊಂದು ವರ್ಷ ಮುಂದೂಡಲೇಬೇಕೆಂಬ ಇರಾದೆಯಲ್ಲಿದ್ದಂತಿರುವ ಸರ್ಕಾರಕ್ಕೆ ತತ್‌ಕ್ಷಣ ಚುನಾವಣೆ ನಡೆಸುವ ಮನಸ್ಸೂ ಇಲ್ಲ. ಅದಕ್ಕೆ ಪೂರ್ವ ಸಿದ್ಧತೆಗಳನ್ನೂ (ಕೊನೆಯ ಪುಟಕ್ಕೆ)

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 30-11-2020 |
|---|---|
| Page No | 6 |

# ಸುಪ್ರಿಂಗೆ ಮೊರೆ!

ಮಾಡಿಕೊಂಡಿಲ್ಲ ಎನ್ನುವುದು ಕೋರ್ಟ್ ಮೆಟ್ಟಿಲೇರುವ ನಿರ್ಧಾರಕ್ಕೆ ಕಾರಣ ಎನ್ನಲಾಗುತ್ತಿದೆ. 198 ವಾರ್ಡ್‌ಗಳಿದ್ದ ಬಿಬಿಎಂಪಿಯನ್ನು 243 ವಾರ್ಡ್‌ಗಳಿಗೆ ವಿಸ್ತರಿಸಿ ಅದರ ನೀಲನಕ್ಷೆಯನ್ನು ಸರ್ಕಾರ ಹಾಗೂ ಕೋರ್ಟ್‌ಗೆ ಈಗಾಗಲೇ ಸಲ್ಲಿಸಿಯಾಗಿದೆ. ಸರ್ಕಾರ ಇದನ್ನು ಒಪ್ಪಿ ಇದಕ್ಕೆ ಪೂರಕವಾದ ಸ್ಪಷ್ಟ ಚಿತ್ರಣವೊಂದನ್ನು ಸಿದ್ಧಗೊಳಿಸಲು ಕಡಿಮೆಯೆಂದರೂ ಒಂದು ವರ್ಷ ಬೇಕಾಗಬಹುದು ಎಂಬ ಮನಃಸ್ಥಿತಿಯಲ್ಲಿತ್ತು. ಆದರೆ ಇದನ್ನು ಪ್ರಶ್ನಿಸಿ ಮಾಜಿ ಕಾರ್ಪೊರೇಟರ್‌ಗಳಾದ ಶಿವರಾಜ್, ಅಬ್ದುಲ್ ವಾಜೀದ್ ಕೋರ್ಟ್ ಮೆಟ್ಟಿಲನ್ನೇರಿದ್ದರು. ಎರಡೂ ಕಡೆಯ ವಾದ-ಪ್ರತಿವಾದಗಳನ್ನು ಆಲಿಸಿದ ಓಕಾ ನೇತೃತ್ವದ ಪೀಠ ತೀರ್ಪನ್ನು ಪ್ರಕಟಿಸದೆ ಕಾಯ್ದಿರಿಸಿದೆ.

ಕೆಲವು ಮೂಲಗಳ ಪ್ರಕಾರ ಚುನಾವಣೆಯನ್ನು ಶೀಘ್ರವೇ ನಡೆಸಬೇಕೆಂದು ಆದೇಶಿಸುವ ಮನಃಸ್ಥಿತಿಯಲ್ಲಿ ಕೋರ್ಟ್ ಇದೆಯಂತೆ. ಏಕೆಂದರೆ ದೀರ್ಘಕಾಲದವರೆಗೂ ಚುನಾಯಿತ ವ್ಯವಸ್ಥೆಯನ್ನು ಆಡಳಿತದಿಂದ ದೂರವಿಡುವುದು ಸರಿಯಲ್ಲ ಹಾಗಾಗಿ ಎಲ್ಲ 243 ವಾರ್ಡ್‌ಗಳ ನೀಲನಕ್ಷೆ ಸಿದ್ಧವಾದ ಮೇಲೆ ಚುನಾವಣೆ ನಡೆಸಲು ತಕರಾರೇನಿದೆ? ಅದನ್ನು ಮುಂದೂಡುವ ಅವಶ್ಯಕತೆಯೇನಿದೆ? ಎನ್ನುವ ಹಿನ್ನೆಲೆಯಲ್ಲಿ ಚುನಾವಣೆಗೆ ಗ್ರೀನ್ ಸಿಗ್ನಲ್ ನೀಡುವ ಸಾಧ್ಯತೆಗಳೇ ಹೆಚ್ಚಾಗಿದೆ ಎನ್ನಲಾಗುತ್ತಿದೆ.

ಒಂದು ವೇಳೆ ವಿಭಾಗೀಯ ಪೀಠ ಚುನಾವಣೆ ನಡೆಸಲೇಬೇಕು ಎಂದು ಆದೇಶಿಸಿದರೆ, ಕೆಲವು ನೆಪಗಳನ್ನು ಮುಂದೊಡ್ಡಿ ಚುನಾವಣೆ ಮುಂದೂಡುವ ಆಲೋಚನೆಯಲ್ಲಿ ಸರ್ಕಾರವಿದೆ ಎನ್ನಲಾಗಿದೆ. ಇದಕ್ಕಾಗಿ ಸಿದ್ಧತೆಯನ್ನು ಕೂಡ ಮಾಡಿಕೊಂಡಿದೆಯಂತೆ. ಒಂದು ವೇಳೆ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರೆ ಅದು ಇತ್ಯರ್ಥವಾಗಲು ಇನ್ನೊಂದಷ್ಟು ವರ್ಷ ಬೇಕಾಗಬಹುದು. ಅಲ್ಲಿಯವರೆಗೂ ಶಾಸಕರ ಮೂಲಕವೇ ಆಡಳಿತ ನಡೆಸಿದರಾಯಿತು ಎನ್ನುವುದು ಸರ್ಕಾರದ ಆಲೋಚನೆಯಾಗಿರಲೂಬಹುದು ಅಲ್ವೇ?

ಸಂಜೆವಾಣಿ
1982

| Date | 30-11-2020 |
| --- | --- |
| Page No | 3 |

# ಹಣ ಬಾಕಿ ಉಳಿಕೆಗೆ ಗುತ್ತಿಗೆದಾರರ ಆಕ್ರೋಶ

ಬೆಂಗಳೂರು, ನ.30– ಬಿಬಿಎಂಪಿಯೂ ಕಸ ವಿಲೇವಾರಿ ಸಂಬಂಧ ಹಣ ಬಾಕಿ ಉಳಿಸಿಕೊಂಡಿರುವುದಕ್ಕೆ ಕೆರಳಿರುವ ಲಾರಿ ಮಾಲೀಕರು ಹಾಗೂ ಗುತ್ತಿಗೆದಾರರು, ನಗರದೆಲ್ಲೆಡೆ ಕಸ ಸಂಗ್ರಹ ಸ್ಥಗಿತಗೊಳಿಸುವಯತ್ತ ಹೆಜ್ಜೆ ಹಾಕಲಿದ್ದಾರೆ.

ಈಗಾಗಲೇ ಬಿಬಿಎಂಪಿ ಸ್ವಚ್ಛತೆ ಮತ್ತು ಲಾರಿ ಗುತ್ತಿಗೆದಾರರ ಸಂಘದ ಪ್ರಮುಖರು, ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಅವರೊಂದಿಗೆ ಸಭೆ ನಡೆಸಿ, ಬಾಕಿ ಹಣ ಬಿಡುಗಡೆಗೆ ಪಟ್ಟು ಹಿಡಿದಿದ್ದಾರೆ. ಆದರೆ, ಯಾವುದೇ ತೀರ್ಮಾನಕ್ಕೆ ಪಾಲಿಕೆ ಮುಂದಾಗಿಲ್ಲ. ಇದರಿಂದ ಮತ್ತಷ್ಟು ಕೆರಳಿರುವ ಲಾರಿ ಮಾಲೀಕರು, ಏಕಾಏಕಿ ಸ್ವಚ್ಛತಾ ಕಾರ್ಯಗಳನ್ನು ಸ್ಥಗಿತಗೊಳಿಸುವ ಕಡೆ ಹೆಜ್ಜೆ ಹಾಕಲಿದರೆ ನಗರದಲ್ಲಿ ಕಸದ ಸಮಸ್ಯೆ ಬಿಗಡಾಯಿಸಲಿದೆ.

ಒಂದು ವೇಳೆ ನಾಳೆಯಿಂದಲೇ ಕಸ ವಿಲೇವಾರಿ ನಿಲ್ಲಿಸಿದರೆ, ಕಸ ಸಂಗ್ರಹಿಸಿ, ವಿಲೇವಾರಿ ಮಾಡಬೇಕಿದ್ದ ಆಟೋಗಳು ಹಾಗೂ ಕಾಂಪ್ಯಾಕ್ಟರ್‌ಗಳು ಬೀದಿಗಿಳಿಯುವುದಿಲ್ಲ. ಇದ–ರಿಂದಾಗಿ ಕಸವಿಲೇವಾರಿ ವ್ಯತ್ಯಯವಾಗಲಿದೆ.

## ಇಂದು ಸಭೆ

**ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಅವರು ಇಂದು ಸಂಜೆ ಮತ್ತೆ ಬಿಬಿಎಂಪಿ ಸ್ವಚ್ಛತೆ ಮತ್ತು ಲಾರಿ ಗುತ್ತಿಗೆದಾರರ ಸಂಘದ ಪ್ರಮುಖರೊಂದಿಗೆ ಸಭೆ ನಡೆಸಲು ಮುಂದಾಗಿದ್ದಾರೆ. ಒಂದು ವೇಳೆ ಸೂಕ್ತ ಭರವಸೆ ನೀಡದಿದ್ದರೆ, ಕಸ ಸಂಗ್ರಹ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣಿಯಂ ತಿಳಿಸಿದರು.**

ರಾಜಧಾನಿ ಬೆಂಗಳೂರಿನಲ್ಲಿ ಪ್ರತಿದಿನ 4,000 ಟನ್‌ಗೂ ಅಧಿಕ ಕಸ ಉತ್ಪತ್ತಿಯಾಗುತ್ತದೆ. ಹಬ್ಬದ ಪ್ರಯುಕ್ತ ಹೆಚ್ಚುವರಿಯಾಗಿ ಸುಮಾರು 500 ಟನ್ ಕಸ ಉತ್ಪತ್ತಿಯಾಗಿದೆ. ಕೆ.ಆರ್. ಮಾರುಕಟ್ಟೆ ಸೇರಿದಂತೆ ಪ್ರಮುಖ ಮಾರುಕಟ್ಟೆಗಳು, ವೃತ್ತಗಳು ಹಾಗೂ ಬೀದಿಗಳಲ್ಲಿ ಕಸ ವಿಲೇವಾರಿ ಆಗಿಲ್ಲ ಎಂದರೆ, ಎಲ್ಲೆಡೆ ರಾಶಿ ಬಿದ್ದು ದುರ್ನಾತ ಬೀರುತ್ತದೆ.

ಅಲ್ಲದೆ, ಪೌರಕಾರ್ಮಿಕರು ಮನೆ, ಮನೆಗೆ ತೆರಳಿ ಕಸ ಸಂಗ್ರಹಿಸಲ್ಲ. ಇದರಿಂದ ನಾಗರಿಕರು ತೀವ್ರ ತೊಂದರೆ ಅನುಭವಿಸಿದರೆ, ಕಸವನ್ನು ರಸ್ತೆ ಬದಿ ಹಾಗೂ ಖಾಲಿ ನಿವೇಶನಗಳಲ್ಲಿ ಸುರಿಯುವ ಪ್ರಸಂಗ ನಡೆಯಲಿದೆ ಎನ್ನುತ್ತಾರೆ ಸಂಘದ ಪ್ರಮುಖರು.

ಎಷ್ಟು ಹಣ ಬಾಕಿ: ಸರ್ಕಾರದಿಂದ ಕಳೆದ ಏಪ್ರಿಲ್‌ನಿಂದ ಈವರೆಗೂ ಗುತ್ತಿಗೆ ಹಣ ಬಿಡುಗಡೆಯಾಗಿಲ್ಲ. ಇದಕ್ಕೆ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ತುಳಸಿ ಮದಿನೇನಿ ನೇರ ಕಾರಣ ಎಂದು ಸಂಘದ ಸದಸ್ಯರೊಬ್ಬರು ದೂರಿದರು.

ಅಲ್ಲದೆ, ಅಧಿಕಾರಿಗಳು ಸಭೆ ನಡೆಸಿ 4 ತಿಂಗಳ ಹಣ ನೀಡುವಂತೆ ಸೂಚನೆ ನೀಡಲಾಗಿದೆ. ಹೀಗಿದ್ದೂ ನಮ್ಮ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಒಂದು ವೇಳೆ ಸಮಸ್ಯೆ ಬಗೆಹರಿಸದಿದ್ದರೆ ನಾಳೆಯಿಂದಲೇ ಕಸ ವಿಲೇವಾರಿ ಮಾಡಲ್ಲ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣಿಯಂ 'ಸಂಜೆವಾಣಿ' ಪತ್ರಿಕೆ ತಿಳಿಸಿದರು.

ಸಂಜೆವಾಣಿ 1982

| Date | 30-11-2020 |
|---|---|
| Page No | 7 |

# ಮಾರ್ಷಲ್‌ಗಳ ಬೆನ್ನಿಗೆ ನಿಲ್ಲದ ಪೊಲೀಸರು?

ಬೆಂಗಳೂರು,ನ.30–ಮಾರ್ಷಲ್‌ಗಳ ಮೇಲೆ ಸಾರ್ವಜನಿಕರೂ ನಿಂದಿಸಿ, ಹಲ್ಲೆಮಾಡಿದರೂ ಯಾವುದೇ ದೂರು ದಾಖಲಿಸಿಕೊಳ್ಳದೆ, ಪೊಲೀಸರು ರಕ್ಷಣೆ ನೀಡುತ್ತಿಲ್ಲ ಎಂದು ಗಂಭೀರ ಆರೋಪ ಕೇಳಿಬಂದಿದೆ.

ನಗರದಲ್ಲಿ ಮಾಸ್ಕ್ ಹಾಕದೇ ಓಡಾಡುವ ಸಾರ್ವಜನಿಕರಿಗೆ ಬಿಬಿಎಂಪಿ ಮಾರ್ಷಲ್‌ಗಳು ದಂಡ ವಿಧಿಸುತ್ತಿದ್ದಾರೆ. ಆದರೆ ಈ ರೀತಿ ದಂಡ ವಿಧಿಸುವ ಮಾರ್ಷಲ್‌ಗಳ ಮೇಲೆ ಸಾರ್ವಜನಿಕರೂ ನಿಂದಿಸಿ, ಹಲ್ಲೆಮಾಡಿದರೂ ಯಾವುದೇ ದೂರು ದಾಖಲಾಗಿಲ್ಲ. ಕಾರಣ ಮಾರ್ಷಲ್‌ಗಳ ದೂರನ್ನು ಪೊಲೀಸರು ಸ್ವೀಕರಿಸದೇ



ಇರುವುದು ಎನ್ನಲಾಗುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೋನಾ ಹಿನ್ನೆಲೆ ಮಾಸ್ಕ್ ಹಾಕದವರಿಗೆ ದಂಡ ವಿಧಿಸಲು ಬಿಬಿಎಂಪಿ ಮಾರ್ಷಲ್‌ಗಳನ್ನು ನೇಮಕ ಮಾಡಿದೆ. ಆದರೆ, ಮಾರ್ಷಲ್‌ಗಳು ಮಾಸ್ಕ್ ಹಾಕಿ ಎಂದು ಸಾರ್ವಜನಿಕರಿಗೆ ಹೇಳಿದರೆ ಮಾರ್ಷಲ್‌ಗಳಿಗೆ ನಿಂದಿಸಿ, ಹಲ್ಲೆ ಮಾಡು ತ್ತಿರುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿವೆ.

ಶನಿವಾರ ಸಂಜೆ ಜಯನಗರದಲ್ಲಿ ಮಾರ್ಷಲ್ ಒಬ್ಬರು ಮಹಿಳೆಯನ್ನು ಯಾಕೆ ಮಾಸ್ಕ್ ಹಾಕಿಲ್ಲ ಎಂದು ಪ್ರಶ್ನಿಸಿದ್ದಕ್ಕೆ, ಮಹಿಳೆ ಮಾರ್ಷಲ್‌ಗೆ ಮಾಸ್ಕ್ ಹಾಕಿದವರಿಗೇನು ಕೊರೋನ ಬರುವುದಿಲ್ವಾ ಎಂದು ನಿಂದಿಸಿದ್ದರು.

ಈ ಬಗ್ಗೆ ಪೊಲೀಸರಿಗೆ ದೂರು ನೀಡಲು ಹೋದರೆ ಅವರು ಕೂಡ ದೂರು ಸ್ವೀಕಾರ ಮಾಡುತ್ತಿಲ್ಲ ಎಂಬುದು ಮಾರ್ಷಲ್‌ಗಳ ಆರೋಪವಾಗಿದೆ.